Reg. No. M. 1550

1—5—1936

IF NOT

delivered

please return to

"KODAGU"
OFFICE,
MERCARA.

KODAGU

ಕೊಡಗು

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಅಚ್ಚುಮೆಚ್ಚಿನ
ಮುದ್ರಣ ಕೆಲಸಕ್ಕೆ
"ಕೊಡಗು"
ಪ್ರೆಸ್ಸು,
ಮಡಿಕೇರಿ.

ಹೆಚ್ಚಿನ ವಿಷಯಕ್ಕೆ
ಕೂಡಲೆ ವಿಚಾರಿಸಿರಿ.

ವಾರ್ಷಿಕ ಚಂದಾ ರೂ. ೩—೪—೦.

ಸಂಪಾದಕ—ಪುಂಡ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೧—೫—೧೯೩೬ [ಸಂಚಿಕೆ ೪೨

Telephon;
3145

By Appointment
To H. E The Governor of Madras.

Telegrams:
'PRECIOUS.'



Brooch

Necklace

Ring.

Ring.

V. SUBRAMANIA IYER.

Jeweller, & Diamond Merchant,

52—23 2 & 3 Kuppumuthu Street Tiruvateswaranpet POST BOX 423 TRIPLICANE. P. O., MADRAS.

Catalogue & special designs with quotations (free) on enqu ry

BANKING FACILITIES OF EVERY DESCRIPTION.

Head office:—UDIPI

BRANCHES:—

1. Madras,
2. Coondapoor.
3. Car Street, Mangalore.
4. Bunder, Mangalore.
5. Shimoga.
6. Udipi
7. Mercara.
8. Virarajendrapet.

Security.

The financial strength and integrity of this Bank is shown by the growth of the RESERVES from a modest sum of Rs. 83000 in 1927 to its present position with Rs. 3,69,986.

BANKERS AT—

1. Bombay.
2. Calcutta.
3. Karachi.
4. Bangalore.
5. Mysore.
6. Calicut.
7. Cannanore.
8. Cochin, and other important places.

To those thinking of investments the following figures should strongly appeal

Capital: Anthorised, issued and subscribed—Rs. 3,50,000.
Paid up Rs 2,87,435.
Deposits—Rs. 27,99 323. Working Capital—Rs. 3,66 707.

The Canara Banking Corporation Udipi Limited.

52—24 Estd. 1906.

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

ಜೀವವಿಮೆ ಮಾಡಿಸುವುದಕ್ಕೆ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%
ಎಂಡೋಮೆಂಟ್ ಪಾಲಿಸಿಗಳ ಮೇಲೆ ಪ್ರತಿ ವರ್ಷಕ್ಕೆ 20%
ಪಾಲಿಸಿಯ ಶರತ್ತುಗಳು ಅತೀ ಸುಲಭ

ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿವೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ಪಂಥವಾರುಪಷ್ಟೆ ಕಮಿಶನ್ ದೊರೆಯುವಂತಿದೆ.
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಪಿ. ಪಿ. ಪೂಣಚ್ಚ, ಎಫ್. ಎಸ್. ಎಸ್. ಎಫ್. (ಲಂಡನ್)
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್, ಪರವಾಗಿ—

ಎ. ಎಫ್ ಎಸ್ ಅಯ್ಯಂಗಾರ್.

ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, ಬಿಲ್ಡಿಂಗ್,
ಚಾಮರಾಜಪೇಟೆ, 3ನೇ ರೋಡ್,

52—46 ಬೆಂಗಳೂರು

ವಿವಿಧ ವಾರ್ತಾವಳಿ.

ಹಿಂದೂ ಸ್ತ್ರೀಯರೇ ಜಗತ್ತಿನ ಸುಂದರಿಯರು.

ಪ್ರಪಂಚದ ಸ್ತ್ರೀಯರೆಲ್ಲೆಲ್ಲಾ ಹಿಂದೂ ಸ್ತ್ರೀಯರೇ ಅತ್ಯಂತ ಸುಂದರಿಯರು ಅವರ ಅಧಿಕಾರ, ಹಣದ ಬಲ, ಯೋಗ್ಯತೆ ಹೇಗಾದರೂ ಇರಲಿ, ಅವರ ಮುಖದಲ್ಲಿ ಒಂದು ವಿಧದ ಗಾಂಭೀರ್ಯವೂ, ಚೆಲುವೂ ಇದೆ. ಚಾಲುಗಳಲ್ಲಿಯೂ ಗಲ್ಲಿಗಳಲ್ಲಿಯೂ ವಾಸಿಸುತ್ತಿರುವ ಹುಟ್ಟು ದರಿದ್ರರಲ್ಲಿಯೂ ಅಸಾಧಾರಣವಾದ ಸುಂದರಿಯರಿದ್ದಾರೆ ಎಂದು ಆಂಗ್ಲ ಸ್ತ್ರೀಯೋರ್ವಳ ಹೇಳಿಕೆ.

—೦೦೦—

ಬೆಟ್ಟು ಮುರಿದರೆ ಹೊಸದ್ದು ಹಚ್ಚಲೂ ಬಹುದು.

ಲೆನಿಗ್ರಾಡದಲ್ಲಿ ಓರ್ವ ಡಾಕ್ಟರರು ಒಬ್ಬ ಹುಡುಗಿಗೆ ಬೆಟ್ಟು ಮುರಿದ ಸ್ಥಳದಲ್ಲಿ ಹೊಸದೊಂದನ್ನು ಕೂಡ್ರಿಸಿದ್ದಾರೆ. ಒಂದು ಅಪಘಾತದಲ್ಲಿ ಆ ಹುಡುಗಿಯು ತನ್ನ ಬೆಟ್ಟನ್ನು ಮುರಿದುಕೊಂಡಿದ್ದಳು. ಅದನ್ನು ನೋಡಿ ಡಾ ಯಂ. ಐ. ಕಸಲೀಕ ಎಂಬವರು ಅವಳ ಸರಿ ವಯಸ್ಸಿನ ಹುಡಿಗಿಯ ಮೃತಶರೀರದಿಂದ ಅಂತದ್ದೇ ಬೆಟ್ಟನ್ನು ಕತ್ತರಿಸಿ ತಂದು ಆ ಹುಡುಗಿಯ ಮುರಿದ ಬೆಟ್ಟಿಗೆ ಜೋಡಿಸಿದರು. ಕೆಲವು ದಿವಸಗಳ ನಂತರ ಅದು ಕೂಡಿಕೊಂಡದ್ದಲ್ಲದೆ ಕತ್ತರಿಸಿ ಹಚ್ಚಿದ ಬೆಟ್ಟಿನ ಗುರುತು ಸಹ ಹತ್ತದಂತಾಗಿರುತ್ತದೆಯಂತೆ

—೦೦೦—

ಶಸ್ತ್ರಕ್ರಿಯೆಯ ಮೂಲಕ ಹುಟ್ಟು ಕುರುಡನಿಗೆ ದೃಷ್ಟಿ ಲಾಭ.

ಲಂಡನಿನಲ್ಲಿಯ ವಾಟರ್ಲೂ ಆಸ್ಪತ್ರೆಯಲ್ಲಿನ ಓರ್ವ ಹುಟ್ಟು ಕುರುಡನ ಕಣ್ಣಿಗೆ ಶಸ್ತ್ರ ಕ್ರಿಯೆ ಮಾಡಿ ಕಾಣು ಕಾಣುವಂತೆ ಮಾಡಲ್ಪಟ್ಟಿತು. ಈ ಹುಟ್ಟು ಕುರುಡನು 5 ವರ್ಷದ ಬಾಲಕನಿದ್ದು ಮೊದಲು ಅವನ ಬಂಜು ಕಣ್ಣಿಗೆ 1934ರಲ್ಲಿ ಶಸ್ತ್ರಕ್ರಿಯೆ ಮಾಡಲ್ಪಟ್ಟಿದೆ. ಅದು ಪೂರ್ಣ ಯಸಸ್ವಿಯಾದುದರಿಂದ ಮೊನ್ನೆ ಅವನ ಎರಡನೇ ಕಣ್ಣಿಗೂ ಶಸ್ತ್ರಕ್ರಿಯೆಯಾಯಿತು ಈ ಪ್ರಯೋಗವಾದರೂ ಯಸಸ್ವಿಯಾಗಿ ಬಾಲಕನ ಎರಡು ಕಣ್ಣುಗಳೂ ನಿಚ್ಚಳವಾಗಿ ಕಾಣಿಸಹತ್ತಿರುತ್ತವೆ

—೦೦೦—

ರಷ್ಯದಲ್ಲಿ ಸ್ತ್ರೀ ಸೈನ್ಯ.

ಇನ್ನು ಕೊಂಚ ಕಾಲವಾದ ಮೇಲೆ ರಷ್ಯದಲ್ಲಿ ಸ್ತ್ರೀಯರ ಸೈನ್ಯವೊಂದು ಸಿದ್ಧವಾಗಲಿದೆ. ಅಲ್ಲಿನ ಸರ್ಕಾರದವರು ಎರಡು ವರ್ಷಗಳ ಮುಂಚೆ ಸ್ತ್ರೀಯರನ್ನು ಸೈನ್ಯಕ್ಕೆ ಸೇರಿಸಿಕೊಂಡು ಅವರಿಗೂ ಸಮಸ್ತ ಕ್ಷಾತ್ರಿಯ ವಿದ್ಯೆಗಳನ್ನು ಕಲಿಸಬೇಕೆಂದು ಗೊತ್ತುಮಾಡಿದರು. ಇದರ ಫಲವಾಗಿ ಈಗ ರಷ್ಯಾದಲ್ಲಿ ಸ್ತ್ರೀ ವೈಮಾನಿಕರು, ನಾವಿಕರು ಇತ್ಯಾದಿ ಸಮಸ್ತ ಸೈನ್ಯ ಭಾಗದವರೂ ಇದ್ದಾರೆ. ಅವರೆಲ್ಲರೂ ನವೀನ ಯುದ್ಧ ಕೃತ್ಯಗಳನ್ನು ಅರಿತು ನುರಿತವರಾಗಿದ್ದಾರೆ. ಆದುದರಿಂದ ಇನ್ನು ಕೊಂಚ ಕಾಲದ ತರುವಾಯ ಸ್ತ್ರೀ ಸೈನಿಕರನ್ನೇ ಪ್ರತ್ಯೇಕ ಮಾಡಿ ಒಂದು ಹೆಂಗಸರ ಪಡೆಯನ್ನು ಸಿದ್ಧಗೊಳಿಸುತ್ತಾರೆ.

—೦೦೦—

ಪಾರ್ಲಿಮೆಂಟಿನಲ್ಲಿ ಸುಭಾಷ್ ಬೋಸರ ಕೈದಿನ ಸುದ್ದಿ.

ಬಾಬು ಸುಭಾಷಚಂದ್ರ ಬೋಸರು ಇವರನ್ನು ಕೈದುಮಾಡಿದ ಬಗ್ಗೆ ಪಾರ್ಲಿಮೆಂಟಿನ ಸಭಾಸದರಿಗೆ ವ್ಯಸನವಾಗಿದೆ ಈ ಬಗ್ಗೆ ಭಾರತ ಮಂತ್ರಿಗಳಿಗೆ ಕೆಲವು ಪ್ರಶ್ನೆಗಳನ್ನು ಕೇಳುವದಕ್ಕಾಗಿ ತಾ. 27 ಕ್ಕೆ ನೋಟೀಸ್ ಕೊಟ್ಟಿದ್ದರು ಈ ವಿಷಯದಲ್ಲಿ ಇಂಡಿಯಾ ಲೀಗ ಪಾರ್ಲಿಮೆಂಟರಿ ಕಮಿಟಿಯು ಹುಟ್ಟು ಶತ್ರು ತೆಗೆದುಕೊಂಡು ಸುಭಾಷ ಬೋಸರನ್ನು ಕೈದು ಮಾಡಿದ್ದರ ನಿಷೇಧಾರ್ಥ ವಾಗಿ ಒಂದು ನಿರ್ಣಯದ ಕಾರ್ಯಕ್ರಮವನ್ನು ಒಂದು ಮಾಡುವ ಸೂಚನೆಯನ್ನು ಮಂಡಿಸುವದು. ಅಲ್ಲದೆ ಅವರ ವಿಷಯವಾಗಿ ಫೋರ್ಟ್‌ಸೈದ ಹಾಗೂ ವ್ಹಿಯನ್ನಾದಲ್ಲಿ ನಡೆವ ಸಂಗತಿಗಳನ್ನು ವಿಚಾರಿಸುವದು.

—೦೦೦—

ರೈತನ ಕಷ್ಟ ನಿವಾರಣೆ.

ತಿರುವಾಂಕೂರಿನಲ್ಲಿ ರೈತರ ಕಷ್ಟವು ಅಸಾಧ್ಯವಾಗಿತ್ತು, ಮಳೆ ಬೆಳೆಗಳ ಅಭಾವದಿಂದಲೂ, ಸಾಲ ಸೋಲಗಳ ಬಾಧೆಯಿಂದಲೂ ಅಲ್ಲಿನ ರೈತರು ಕುಗ್ಗಿ ಹೋಗಿದ್ದರು. ಅವರ ಕಷ್ಟ ನಿವಾರಣೋಪಾಯವನ್ನು ಅಲ್ಲಿನ ಸರ್ಕಾರವು ಈಗ ಕೈಕೊಂಡಿದೆ. ಮೊನ್ನೆ ನಡೆದ ಶಾಸನ ಸಭೆಯಲ್ಲಿ ರೈತರ ಋಣಜಾಧಾ ವಿಷಯವಾಗಿ ಮಸೂದೆಯೊಂದು ಅನುಮೋದಿತವಾಯಿತು ಅದರ ಪ್ರಕಾರ ಸ್ತ್ರೀ ಗಾಸ್ಪಾಮಿದಲ್ಲಿ ಸಾಲಗಾರರಾಗಿರುವವರಿಗೆ, ಸಾಲ ತೆಗೆದುಕೊಂಡವರಿಗೂ ಮಧ್ಯಸ್ಥ ನಡೆಸಿ ಸಾಲ ಸೋಲಗಳ ತೀರ್ಮಾನ ಮಾಡಿಸುವದರಲ್ಲಿ ಉದ್ಯುಕ್ತರಾಗಿದ್ದಾರೆ. ಹಾಗೆಯೇ ಅಸಲಿಗೆ ಹಾಕುವ ಪರಮಾವಧಿ ಒಡ್ಡಿಯನ್ನೂ ಗೊತ್ತುಮಾಡಿದ್ದಾರೆ. ಹೀಗೆಯೇ ಬೇರೆ ಸರ್ಕಾರಗಳೂ ಮಾಡಬಾರದೇ?

—೦೦೦—

ಗುಪ್ತ ಆಜ್ಞೆ.

ದೆಹಲಿಯಿಂದ ಹೊರಡುವ 'ಹಿಂದೂಸ್ಥಾನ್ ಟೈಮ್ಸ್' ಎಂಬ ಪ್ರಸಿದ್ಧ ವೃತ್ತಪತ್ರಿಕೆಯು ಈ ಸಮಾಚಾರವನ್ನು ತಿಳಿಸುತ್ತದೆ. 'ಸಂಯುಕ್ತ ಪ್ರಾಂತ್ಯಗಳ ಸರ್ಕಾರದವರು ಒಂದು ಗುಪ್ತ ಆಜ್ಞೆಯನ್ನು ಪ್ರಾಂತ್ಯದ ಎಲ್ಲಾ ಪೋಲೀಸು ಅಧಿಕಾರಿಗಳಿಗೂ ಕಳುಹಿಸಿದ್ದಾರೆ. ಈಗ ಪಂಡಿತ ಜವಾಹರ್‌ಲಾಲರು ಕಾಂಗ್ರೆಸ್ ಅಧ್ಯಕ್ಷರಷ್ಟೆ. ಅವರು ಕೊಡುವ ಎಲ್ಲಾ ಭಾಷಣಗಳನ್ನೂ ಅತ್ಯಂತ ಜಾಗರೂಕತೆಯಿಂದ ಪರೀಕ್ಷಿಸಿ ಯಾವುದಾದರೂ ಗಮನಿಸತಕ್ಕ ವಿಷಯವಿದ್ದರೆ ಅದನ್ನೂ ಅವನ್ನು ಕುರಿತು ಅವರ ಟೀಕೆಯನ್ನೂ ಸರ್ಕಾರಕ್ಕೆ ಪೋಲೀಸು ಅಧಿಕಾರಿಗಳು ತಿಳಿಸಬೇಕೆಂದು ಆ ಆಜ್ಞೆಯು ವಿಧಾಯಕ ಮಾಡುತ್ತದೆ. 'ಅಲ್ಲದೆ ಸಮುಯ ಸಂಪರ್ಕ ಹೇಗೆ ಬಂದರೂ ಎಲ್ಲಕ್ಕೂ ಸಿದ್ಧರಾಗಿರುವಂತೆಯೂ ಪೋಲೀಸರನ್ನು ಅದು ಎಚ್ಚರಿಸುತ್ತದೆ.'

—೦೦೦—

ವಿವಾಹದ ಹುಚ್ಚು ಹೇಗಿದೆ?

ಅಮೆರಿಕದ ಲಾಸ್ ಏಂಜೆಲ್ಸಿನ ರಾಬರ್ಟ್ ತೀವ್ ಎಂಬವನಿಗೆ ಈಗ 103 ವರ್ಷ ವಯ್ಯ. ಅವನಿಗೆ ಈ ವೊದಲು 15 ಮದುವೆಯಾಗಿದೆ. ಈಗ 16 ನೇ ಸಲ ಮದುವೆ ಮಾಡಿಕೊಳ್ಳುವ ಅಪೇಕ್ಷೆಯಿಂದಿರುತ್ತಾನೆ. ಇಷ್ಟರ ವರೆಗೆ ಈತನ ವಿವಾಹಗಳೆಲ್ಲಾ ಸುಖಕರವೇ ಆಗಿದ್ದುವು. ಈತನಿಗೆ ವಿವಾಹವಿಚ್ಛೇದದಲ್ಲಿ ವಿಶ್ವಾಸವಿಲ್ಲ. ಕಲ್ಕತ್ತದ ಮಿಸೆಸ್ ಹಾರ್ವೆಯೆಂಬವಳು ಬೇರೆ ಬೇರೆ ಜನಾಂಗಗಳ 13 ಮಂದಿ ಗಂಡಂದಿರನ್ನು ಮದುವೆಯಾಗಿದ್ದಳು. 13 ಮಂದಿ ಗಂಡಂದಿರು ತೀರಿ ಹೋದರೂ ಮಿಸೆಸ್ ಹಾರ್ವೆಯು ಜಡ್ಡುಕಿರುವಳು ಪೆರಿಸಿನ ಜಾಕ್ವೆಲಿನ್ ಎಂಬವಳು 14 ಬೇರೆ ಬೇರೆ ಗಂಡಂದಿರಿಂದ 17 ಮಕ್ಕಳನ್ನು ಪಡೆದಿದ್ದಳು ಆದರೆ ರೋಮ್ ಪಟ್ಟಣದ ಹೆರೋನಿಮಸ್ ಎಂಬವನ ಸಂಗತಿಯು ಇವರೆಲ್ಲರಿಗಿಂತಲೂ ವಿಜಾತೀಯವಾಗುದು. ಇವನು 21 ಸ್ತ್ರೀಯರನ್ನು ಮದುವೆಯಾಗಿದ್ದನು. ಅವನ ಇಪ್ಪತ್ತೊಂದನೇ ಪತ್ನಿಗೆ ಆ ನೊಡಲೇ 20 ಮದುವೆಯಾಗಿತ್ತು:

—೦೦೦—

ಶ್ರೀ ಜವಾಹರ್‌ಲಾಲರ ಜೀವನ ಕಥೆ

ತನ್ನ ಚರಿತ್ರೆಯನ್ನು ಚಿತ್ರಿಸಿ ಶ್ರೀ ಜವಾಹರ್‌ಲಾಲರು ಬರೆದ ಗ್ರಂಥವು ಬ್ರಿಟನಿನಲ್ಲಿ ಪ್ರಕಟವಾಗಿರುತ್ತದೆ. ಸಾಹಿತ್ಯ ಲೋಕದಲ್ಲಿ ಇದೊಂದು ವಿಶೇಷ ತರದ ಗ್ರಂಥವಾಗಿರುತ್ತದೆಂದು ಆ ಗ್ರೇಯ ಪತ್ರಜ್ಞರ ಅಭಿಪ್ರಾಯ. ಈ ಗ್ರಂಥದಲ್ಲಿ ಶ್ರೀ ನೆಹರೂರವರು ತನ್ನ ರಾಜಕೀಯ ಜಟುವಟಿಕೆಗಳನ್ನು ಅನೇಕ ವಿಷಯಗಳಿಂದೊಡಗೂಡಿ ಚಿತ್ರಿಸಿರುವರು. ಗ್ರಂಥದಲ್ಲಿ 600 ಪುಟಗಳಿವೆ. ಇದರ ಪ್ರಸ್ತಾವನೆಯನ್ನು ಓದಿದವರು ಇದನ್ನು ಸಂಪೂರ್ಣವಾಗಿ ಓದದೆ ಬಿಡರು. ಈ ತರಹದ ಗ್ರಂಥಗಳನ್ನು ಅನೇಕ ಮಹನೀಯರು ಬರೆದಿರುವರು. ಆದರೆ ಅವುಗಳಿಗೆ ಇಷ್ಟು ಯೋಗ್ಯತೆ ಇಲ್ಲವೆಂದು ಓರ್ವ ಆಂಗ್ಲ ಸಾಹಿತಿಗಳ ಅಭಿಪ್ರಾಯ. ಈ ಗ್ರಂಥವನ್ನು ಶ್ರೀ ನೆಹರುಗಳು ತನ್ನ ಕಾರಾಗೃಹವಾಸದಲ್ಲಿ ಬರೆದುದು. ಸೆರೆ ಮನೆಯೊಳಗಿದ್ದು ಈ ರೀತಿಯಲ್ಲಿ ತನ್ನ ಜೀವನ ಸತ್ಯಗಳನ್ನು ಒಟ್ಟುಗೂಡಿಸಿದುದು ಪ್ರಪೂರ್ವಶ್ಯ! ಈ ಗ್ರಂಥವನ್ನು ಓದಿದವರಲ್ಲಿ ಶ್ರೀ ಜವಾಹರ್‌ರವರು ಕುರಿತು ನಿಜವಾದ ಅಭಿಪ್ರಾಯ ಹೊರಕುತ್ತದೆ.

—೦೦೦—

ಕಲ್ಕತ್ತದಲ್ಲಿ ಮೋಟಾರು ಕಾರ್ಖಾನೆ.

ಕಲ್ಕತ್ತದಲ್ಲಿ ಒಂದು ಮೋಟಾರು ಕಾರ್ಖಾನೆಯನ್ನು ಪ್ರಾರಂಭಿಸುವರಂತೆ. ಅದು ಆದ್ಯಂತ ಭಾರತೀಯರದು. ಪ್ರಾರಂಭದಲ್ಲಿ ಹಾಕುವ ಬಂಡವಾಳ 1 ಕೋಟಿ ರೂಪಾಯಿಗಳು. ಈ ಕಾರ್ಯನಿರ್ವಹಣಕ್ಕಾಗಿ, ಮೇಲ್ವಿಚಾರಣೆಗಾಗಿ ಒಂದು ಪಂಚಾಯಿತಿನ ಸಮಿತಿಯ ನೇಮಕಮಾಡಿಸಲಾಗುತ್ತಾರೆ ಈ ಸಮಿತಿಯ ಪಂಚಾಯಿತಿದಲ್ಲರೂ ಕುಬೇರರು, ದೇಶದ ಸೆಟ್ಟಿನ ನಾಯಕರು ಅಲಕೆಯೋರನ ಪ್ರಸಿದ್ಧ ಕಂಪೆನಿಯ ನಾಯಕರಾದ ಸರ್ದಾರ್ ಒವ ಮತ್ತು ಸಿಂಗತವರು ಪಂಚಾಯಿತರಲೆಲ್ಲಿಬ್ಬರೆಂದು ಗೊತ್ತಾಗಿದೆ.

ಕಲ್ಕತ್ತದ ಒಂದು ಅನುಕೂಲವಾದ ಪಾರ್ಶ್ವದಲ್ಲಿ ಈ ಕಾರ್ಖಾನೆಯನ್ನು ಕಟ್ಟುವರಂತೆ ಅದರ ಮೇಲ್ವಿಚಾರಣೆಯನ್ನು ಒಂಗಾಳಿ ಸದ್ಗೃಹಸ್ಥರಿಗೆ ಬಿಡುತ್ತಾರೆ ಅದರ ನಿರ್ವಹಣೆಯಲ್ಲಿ ಅನೇಕ ವಿದೇಶಿ ಮೋಟಾರು ಕಾರ್ಖಾನೆಯವರದ ಪ್ರೋರ್ಡ್‌ನವರು ಕಾರ್ಯ ಸಮಿತಿಯಲ್ಲಿ ಈಗಿನ ಮಾಜಿದ್ದಾರೆ. ಅವರೆಲ್ಲರೂ ಆ ಅನುಭವಸ್ಥರು ಮೇಲ್ವಿಚಾರಣೆಯಲ್ಲಿ ಮುಖ್ಯರು. ಮೋಟಾರು ಕೈಗಾರಿಕೆಗೆ ಸಂಬಂಧಪಟ್ಟ ಸಮಸ್ತ ಯಂತ್ರ ಸಾಮಗ್ರಿಗಳನ್ನೂ ಅಲ್ಲಿ ತಯಾರಿಸುತ್ತಾರೆ. ಮೋಟಾರುಗಳ ಜೊತೆಗೆ ಲಾರಿ, ಬಸ್ಸು ಇತ್ಯಾದಿ ನಾನಾ ಬಗೆಯ ವಾಹನಗಳನ್ನೂ ನಿರ್ಮಿಸುತ್ತಾರೆ.

—೦೦೦—

'ಲೋಕೋ ಭಿನ್ನರುಚಿ' ಎಂದರೆ ಇದೇ?

ಪಂಜಾಬಿನ ಮುಲ್ತಾನ್ ಪಟ್ಟಣದಲ್ಲಿರುವ ಗುಪ್ತನೆಂಬ ಕರುಣ ಬಂಗಾಳಿಯು ಬಹುತೇಕ ವಿಷ ಹಾವುಗಳನ್ನು ಆಹಾರವಾಗಿ ತೆಗೆದುಕೊಳ್ಳುವನು. ಅವುಗಳಿಗೆ ಹೆಚ್ಚಿನ ಬೆಲೆಕೊಟ್ಟು ಕೊಂಡುಕೊಳ್ಳುವನು ತನಗೆ ತಿನ್ನಲಾಗದ ಸಜೀವ ಹಾವನ್ನಾದರೂ ತಂದುಕೊಟ್ಟಲ್ಲಿ ರೂ. 500 ಇನಾಮು ಕೊಡುವೆನೆಂದು ಪ್ರಕಟಪಡಿಸಿರುವನು. ಮಾನವನ ರುಚಿಯು ವಿಚಿತ್ರವಾಗುದು. ಮಧ್ಯ ಆಫ್ರಿಕದ ಕೆಲವು ಭಾಗಗಳಲ್ಲಿ ಇರುವೆಗಳನ್ನು ಬೇಯಿಸಿ ತಯಾರಿಸುವ ಸಾರು ಬಹಳ ರುಚಿಕರ ಪದಾರ್ಥ! ಎಮೇಜೋನ್ ನದಿ ತೀರದ ನಿವಾಸಿಗಳಿಗೆ ಅದೊಂದು ಬಗೆಯ ಮಂಣು ಬಹಳ ರುಚಿಕರ ಆಹಾರವಾಗಿರುತ್ತದೆ! ಏಷ್ಯ ಮತ್ತು ಆಫ್ರಿಕಾ ಖಂಡದ ಕೆಲವು ಜನರಿಗೆ ಹಾತೆಗಳ ಕಾಲು ಮತ್ತು ಎನೆಭಾಗ ಬಹಳ ರುಚಿ! ಚೀನದಲ್ಲಿ 4 ವರ್ಷಗಳಿಗಿಂತಲೂ ಹಳೆಯದಾದ ವೊಟ್ಟೆಗಳೆಂದರೆ ಅತ್ಯಂತ ಸವಿ ತಿಂಡಿ! ಟರ್ಕಿಸ್ಥಾನದಲ್ಲಿ ಕರಿಯ ಬೆಕ್ಕುಗಳು ದೊಡ್ಡ ದೊಡ್ಡ ಔತಣಗಳಲ್ಲಿ ಗೌರವದ ತಿನಿಸಾಗಿರುತ್ತದೆ!

—೦೦೦—

ಮಾನವ ಶರೀರದ ಬೆಲೆ.

ಬರೇ ರೂ. 2—5—4.

ಮನುಷ್ಯನಿಗೆ ಎಲ್ಲಿಯಾದರೂ ಬೆಲೆ ಕಟ್ಟುವುದಕ್ಕಾಗುತ್ತದೆಯೇ ಎಂದು ಸಾಮಾನ್ಯವಾಗಿ ಎಲ್ಲರೂ ಅನ್ನುವ ಮಾತು. ಹೌದು, ಯಾವ ಮನುಷ್ಯನೇ ಮುಂದೆ ಬರಲಿ ಅವನ ವಾಸ್ತವಿಕ ಬೆಲೆ ಇಷ್ಟೇ ಎಂದು ಹೇಳಿಬಿಡಬಹುದು ಎಂಬದನ್ನು ಒಬ್ಬ ಪ್ರಸಿದ್ಧ ಅಮೇರಿಕದ ರಸಾಯನಜ್ಞನು ಕಂಡುಹಿಡಿದಿದ್ದಾನೆ. ಅತನ ಶೋಧನೆಯ ಪ್ರಕಾಶ. ಸರಾಸರಿ ಮನುಷ್ಯನ ಬೆಲೆ 3 ಷಿಲ್ಲಿಂಗು 6 ಪೆನ್ನಿಗಿಂತ ಹೆಚ್ಚಿಲ್ಲವಂತೆ ಸಾಮಾನ್ಯ ಮನುಷ್ಯನೇ ಏಕೆ ಮಹಾರಾಜರು, ಚಕ್ರವರ್ತಿಗಳು, ಜಗದ್ಗುರುಗಳು ಎಲ್ಲರೂ ಶೇಕಡ 59 ರಷ್ಟು ನೀರೇ. ರಕ್ತದಲ್ಲಿ ನೂರಕ್ಕೆ 90 ರಷ್ಟು ನೀರು ಕಟ್ಟಿಗೆಯು ಹಾಗಿರುವ ಎಲುಬಿನಲ್ಲಿ ಕೂಡ ನೂರಕ್ಕೆ 27 ರಷ್ಟು ನೀರಿದೆ. ಇವನ್ನು ಬಿಟ್ಟು ಶರೀರದಲ್ಲಿ ಉಳಿದದ್ದು ಸುಣ ಇತ್ಯಾದಿ ಲವಣಗಳು, ಜಿಡ್ಡಾದರೂ ಒಹಳವಿಲ್ಲ ಬೇಯಿಸಿದಾಗ ರಬ್ಬರಿನ ಹಾಗೆ ಬಂಡುಬಡತ್ತೆ. ಇದಕ್ಕೆ 'ಜಿಲೆಟಿನ್' ಅನ್ನುತ್ತಾರೆ ಅತೂ ಈ ವಸ್ತುಗಳಿಗೆಲ್ಲಾ ಲೆಕ್ಕ ಕಟ್ಟುತ್ತ ಹೋದರೆ 4 ಬಾರು ಸೋಪು ಮಾಡುವಷ್ಟು ಸಕ್ಕರೆ, ಕೊಂಚ ವೆಗ್ಗೀಷಿಯಂ, 2000 ಬೆಂಕಿಯ ಕಡ್ಡಿಗಳಿಗೆ ಸಾಕಾಗುವಷ್ಟು ರಂಜಕ, (ಫಾಸ್‌ಫರಸ್) ಒಂದು ಅಂಕಣ ತೊಳೆಯುವಷ್ಟು ಸುಂಣ, ಎಂಡು ಸಾಧಾರಣ ವೊಳೆಗೆಳಿಗಾಗುವಷ್ಟು ಕಬ್ಬಿಣ ಇವಾಗುತ್ತೆ. ಇವನ್ನೆಲ್ಲ ಅಂಗಡಿಗೆ ತೆಗೆದುಕೊಂಡು ಹೋದರೆ 3 ಷಿಲ್ಲಿಂಗು 6 ಪೆನ್ನಿಗೆ ಹೆಚ್ಚಾಗಿ ಒಂದು ಪೆನ್ನಿ ಕೂಡ ಬರುವದಿಲ್ಲ.

—೦೦೦—

ಗುಟ್ಟನ್ನು ರಟ್ಟು ಮಾಡುವ ಮೂಲಿಕೆ

ಇಂಗ್ಲೆಂಡಿನ ಹಳ್ಳಿಗಾಡಿನಲ್ಲಿ ಒಂದು ವಿಧದ ಬಳ್ಳಿ ಬೆಳೆಯುತ್ತದೆ. ದೊಡ್ಡ ಬಳ್ಳಿಯೇನೂ ಅಲ್ಲ; ನೆಲವನ್ನೇ ಹಬ್ಬಿಕೊಂಡಿರುತ್ತದೆ. ಅದು ಹಳದಿ ಬಣ್ಣದ ಹೂ ಬಿಡುತ್ತದೆ. ಯಾವ ವಿಧದಲ್ಲೂ ಯಾವ ವಿಶೇಷವೂ ಇದರಲ್ಲು ಕಾಣಬರುವುದಿಲ್ಲ, ಆದರೆ ಒಂದು ದೊಡ್ಡ ಗುಣ ಆ ಹೂವಿನ ರಸಕ್ಕಿದೆ. ಅದನ್ನು ಯಾರು ಕುಡಿಯುತ್ತಾರೋ ಅವರಿಗೆ ಕೆಲವು ಸಮಯ ನಿಜವೇ ರುತ್ತದೆ. ಬಾಹ್ಯ ಪ್ರಪಂಚದ ಜ್ಞಾನವು ಇದ್ದರೂ ವಿವೇಚನಾ ಶಕ್ತಿಯು ಇರುವುದಿಲ್ಲ ಮನಸ್ಸಿಗೆ ಬಂದುದನ್ನೆಲ್ಲ ಆಡಿಬಿಡಬೇಕಾಗುತ್ತದೆ. ಈ ಅಂಶವನ್ನು ಯಾರೂ ಅಷ್ಟು ಗಮನಕ್ಕೆ ತಂದುಕೊಂಡಿರಲಿಲ್ಲ. ಅನೇಕರ ತಲೆಯಲ್ಲಿ ದಗಾಕೋರರೂ, ದಗಲಬಾಜಿಗಳೂ ವಿಪರೀತವಾಗಿ ಬೆಳೆದುಬಿಟ್ಟಿರುವಂಷ್ಟೆ. ಒಂದುವೇಳೆ ಅವರನ್ನು ಹಿಡಿದರೂ ಅವರ ಬಾಯಿಂದ ನಿಜಾಂಶವನ್ನು ಹೊರಡಿಸುವುದೊಂದು ಭಗೀರಥ ಪ್ರಯತ್ನ. ಎಷ್ಟು ಚಿತ್ರ ಪಶ್ನೆ, ರಾವಣಾಬಾಧೆ ಕೊಟ್ಟರೂ ಬಾಯಿಬಿಡಿಸುವದಿಲ್ಲ. ಅಲ್ಲಿನ ಪೋಲೀಸಿನವರಿಗೆ ಇದೊಂದು ಸಮಸ್ಯೆಯಾಗಿದ್ದು ಈಗ ಅವರು ಆ ಬಳ್ಳಿಯ ರಸವನ್ನು ಕುಡಿಸುವ ಉಪಾಯವನ್ನು ಕಂಡು ಹಿಡಿದುಕೊಂಡಿದ್ದಾರೆ. ಅದನ್ನು ಕುಡಿಸಿ ಪ್ರಶ್ನೆ ಕೇಳಲು ಪ್ರಾರಂಭಿಸಿದರೆ ಸ್ವಲ್ಪವೂ ಮರೆಮಾಚದೆ ಎಲ್ಲಕ್ಕೂ ಉತ್ತರ ಕೊಟ್ಟುಬಿಡುತ್ತಾರೆ. ಅವರ ಮತ್ತು ಅವರ ಗುಂಪಿನ ಯೋಚನೆ, ಚಲನ ವಲನಗಳೂ ಪಶ್ನೆಯಾಗಿ ಹೋಗಿ ದಗಾಕೋರರ ಪುಡಿಪಡಿಗುತ್ತಿದೆ. ಇವನ್ನೂ ಪ್ರಾರಂಭ ಆಗಲೇ ಪುಡುಗಾಯಿಗೆ ಗರ್ಭ ನಿರೋಧಕ್ಕೆ ಪ್ರಾರಂಭವಾಗಿ ಹೋಗಿದೆ ಳ್ಳಿಗೆ ಬೀಳದಂತೆ ಪರಾರಿಯಾಗುವುದೊಂದೇ ಸಧ್ಯ ಉಳಿದಿರುವ ಮಾರ್ಗ. ಕಾಲ ಕ್ರಮದಲ್ಲಿ ಮತ್ತಾವ ಪ್ರತಿಕ್ರಿಯೆಗಳನ್ನು ಕಾಡುಹಿಡಿಯುವರೊ ಹೇಳುವುದು ಹೇಗೆ? ಈ ರೀತಿಯ ಅನೇಕರ ದಗಾಕೋರತನ ತಪಸ್ಯಯಕ್ಕೆ ಪಾರವೇ ಇಲ್ಲ.

—೦೦೦—

ಪಂಡಿತ ಜವಾಹರಲಾಲರ ಭಾಷಣ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಹೋದ ವರ್ಷ ಕಾಂಗ್ರೆಸು ಯಂತ್ರದ ಲೋಪ ದೋಷಗಳನ್ನು ಹೋಗಲಾಡಿಸಲು ಅಂಗರಚನೆಯನ್ನು ಪುನರಾರ್ತಿಸುವ ಪ್ರಯತ್ನವು ನಡೆಯಿತು. ಆ ಪ್ರಯತ್ನವು ಎತ್ತರವನ್ನು ಟ್ಟಿಗೆ ಜಯಪ್ರದವಾಯಿತು. ಅಥವಾ ಇಲ್ಲವೆಂಬುದನ್ನು ನಾನು ನಿರ್ಣಯ ಮಾಡಲು ಸಮರ್ಥನಾಗಿಲ್ಲ. ಅದು ಸಂಸ್ಥೆಯನ್ನು ಹೆಚ್ಚು ವಿಚಕ್ಷಣೆಯಿಂದ ಕೂಡಿದುದಾಗಿ ಮಾಡಿರಬೇಕು. ಆದರೆ ಅದರ ಹಿಂದೆ ಶಕ್ತಿಯಿಲ್ಲದ ವಿಚಕ್ಷಣತೆಯಿಂದ ಪ್ರಯೋಜನವಿಲ್ಲ. ನಮಗೆ ಶಕ್ತಿಯು ಬರಬೇಕಾದರೆ ಜನಸಮುದಾಯದಿಂದಲೇ ಬರಬೇಕು ಈಗಿನ ಕಾಂಗ್ರೆಸ್ ಘಟನೆಯು ಆ ಸಂಸ್ಥೆಯ ಅಧಿಕಾರಿಯು ಭಾಗವನ್ನೇ ಇನ್ನೂ ಹೆಚ್ಚಾಗಿ ಒತ್ತುತ್ತದೆ. ಗ್ರಾಮಗಳ ಪ್ರಾತಿನಿಧ್ಯವನ್ನು ಪ್ರಾಧಾನ್ಯ ಮಾಡಿದ್ದಾಗ್ಯೂ ಜನಸಮುದಾಯದೊಂದಿಗೆ ಪರಿಣಾಮಕಾರಿಯಾದ ಸಂಬಂಧಗಳನ್ನು ಏರ್ಪಡಿಸಿಲ್ಲ.

ನಿಜವಾದ ಸಮಸ್ಯೆ.

ನಮಗೆ ಈಗ ಇರುವ ನಿಜವಾದ ಸಮಸ್ಯೆಯಿದು. ದೇಶದ ಎಲ್ಲಾ ಸಾಮ್ರಾಜ್ಯ ವಿರೋಧ ಶಕ್ತಿಗಳನ್ನೂ ಒಟ್ಟುಗೂಡಿಸುವುದು ಹೇಗೆ? ಅವನ್ನು ಸಂಪೂರ್ಣ ಸ್ವಾತಂತ್ರ್ಯ ಸಾಧನೆಯ ಸಂಗ್ರಾಮಕ್ಕೆ ಪ್ರೇರೇಪಿಸುವುದು ಹೇಗೆ? ನಾವು ನಮ್ಮ ಪ್ರಜಾ ಸಮುದಾಯದ ಮುಂದಾಳುತ್ವವನ್ನು ವಿರ್ಪಡಿಸಿ ಅದಕ್ಕೆ ಸಂಪೂರ್ಣ ಸ್ವಾತಂತ್ರ್ಯಕ್ಕೆ ಹೋರಾಡುವ ಮಧ್ಯಮ ವರ್ಗದ ಬಹುಸಂಖ್ಯಾಕರ ಬೆಂಬಲವನ್ನು ದೊರಕಿಸುವುದು ಹೇಗೆ? ಸಂಯುಕ್ತ ಪ್ರಜಾ ವರ್ಗದ ರಣಾಗ್ರವು ಇಂಪೀರಿಯಲಿಸಮಿಗೆ ಸ್ವಲ್ಪವೂ ಜಾಗವೀಯದ ವಿರೋಧವನ್ನು ಒಳಗೊಂಡಿರಬೇಕು; ಅದಕ್ಕೆ ಬಲವು ದೇಶದ ನೈತರು ಮತ್ತು ಕೆಲಸಗಾರರು ಕಾರ್ಯೋತ್ಮಕ ಭಾಗ ತೆಗೆದುಕೊಳ್ಳುವವರಿಂದಲೇ ಬಂದೀತು.

'ಸೋಷಿಯಲಿಸಂ.'

ಪ್ರಪಂಚದ ಎಲ್ಲಾ ಸಮಸ್ಯೆಗಳಿಗೂ ಮತ್ತು ಇಂಡಿಯಾದ ಸಮಸ್ಯೆಗಳಿಗೂ ಪರಿಹಾರದ ಬೀಗದ ಕೈ. ಅದು ಒಂದೇ ಪರಿಹಾರ 'ಸೋಷಿಯಲಿಸಂ' (ಸಮತಾವಾದ) ನಲ್ಲಿದೆ ಎಂಬುದು ನನಗೆ ಮನವರಿಕೆಯಾಗಿದೆ. ನಾನು ಪ್ರಪಂಚವೆಂಬ ಶಬ್ದವನ್ನು ಉಪಯೋಗಿಸುವಾಗ ಅದನ್ನು ಅನಿರ್ದಿಷ್ಟವಾದ ಪಾರಮಾರ್ಥಿಕ ರೀತಿಯಾಗಿ ಉಪಯೋಗಿಸುವದಿಲ್ಲ. ಅದರ ಅಪರ ವೈಜ್ಞಾನಿಕ ಮತ್ತು ಆರ್ಥಿಕ ಅರ್ಥದಲ್ಲಿ ಉಪಯೋಗಿಸುತ್ತೇನೆ. 'ಸೋಷಿಯಲಿಸಂ' ಕೇವಲ ಆರ್ಥಿಕಸಿದ್ಧಾಂತವಲ್ಲ. ಅದಕ್ಕಿಂತಲೂ ದೊಡ್ಡದು. ಅದು ಜೀವನದ ಒಂದು ವೇದಾಂತ (ದರ್ಶನ) ಆ ರೀತಿಯಾಗಿ ಅದು ನನ್ನ ಮನಸ್ಸಿಗೆ ಆಕರ್ಷಕವಾಗಿದೆ. 'ಸೋಷಲಿಸಂ' ಮುಖಾಂತರವಲ್ಲದೆ ಬೇರೆ ಮಾರ್ಗದಿಂದ ಭಾರತೀಯ ಪ್ರಜಾ ಸಮುದಾಯದ ಬಡತನವನ್ನೂ ಅತ್ಯಂತ ನಿರುದ್ಯೋಗವನ್ನೂ, ಅಧಃಪತನ ಸ್ಥಿತಿಯನ್ನೂ ಮತ್ತು ಪರಾಧೀನತೆಯನ್ನೂ ನಿವಾರಿಸುವ ಉಪಾಯವನ್ನು ನಾನು ಕಾಣೆ ಈ ಮಾರ್ಗದ ಅನುಸರಣೆಯಿಂದ ನಮ್ಮ ರಾಜಕೀಯ ಮತ್ತು ಸಾಮಾಜಿಕ ರಚನೆಯಲ್ಲಿ ಬಹಳ ದೂರಗಾಮಿಯಾದ ಕ್ರಾಂತಿಕಾರಕ ಬದಲಾವಣೆಗಳಾಗುತ್ತವೆ. ಜಮೀನ್ ಮತ್ತು ಕೈಗಾರಿಕೆಗಳಲ್ಲಿ ಕಾಪಿಡಲ್ಪಟ್ಟ ಹಿತಗಳೂ ನಾಶವಾಗುತ್ತದೆ. ಫ್ಯೂಡಲ್ ಮತ್ತು ನಿರಂಕುಶ ಭಾರತೀಯ ದೇಶೀಯ ಸಂಸ್ಥಾನಗಳ ಪದ್ಧತಿಯು ನಿರ್ನಾಮವಾಗುತ್ತದೆ. 'ಸೋಷಿಯಲಿಸಂ' ಬಂದರೆ 'ಫ್ಯೆನೇಟ್' ಪ್ರಾಪರ್ಟಿ ಅಂದರೆ ಖಾಸಗಿ ಆಸ್ತಿಯು ಕೊನೆಗಾಣುತ್ತದೆ. ಈಗಿನ ಲಾಭ ಪಡೆಯುವ ಪದ್ಧತಿಗೆ ಬದಲಾಗಿ ಉನ್ನತ ಆದರ್ಶದ ಪರಸ್ಪರ ಸಹಾಯ ಸೇವಾ ಪದ್ಧತಿಯೂ ಆಚರಣೆಗೆ ಬರುತ್ತದೆ. 'ಸೋಷಿಯಲಿಸಂ' ಬಂದರೆ ನಮ್ಮ ನಡನಳಿಕೆಗಳೂ, ಪದ್ಧತಿಗಳೂ ಮತ್ತು ಆಪೇಕ್ಷೆಗಳಲ್ಲಿಯೇ ಬದಲಾವಣೆಗಳಾಗುತ್ತವೆ. ಸಂಕ್ಷೇಪವಾಗಿ ಹೇಳಬೇಕಾದರೆ ಅದೇ ಒಂದು ಹೊಸ ನಾಗರೀಕತೆ. ಈಗಿನ ಧನಿಕತ್ವ (ಕ್ಯಾಪಿಟಲಿಸಂ) ಪದ್ಧತಿಯ ವ್ಯವಸ್ಥೆಗಿಂತಲೂ ತೀರ ಭಿನ್ನವಾದ್ದು. ಈ ಹೊಸ ನಾಗರೀಕತೆಯ ಕೆಲವು ದೃಶ್ಯಗಳನ್ನು ಸೋವಿಯಟ್ ರಷ್ಯಾದಲ್ಲಿ ಸ್ವಲ್ಪ ಮಟ್ಟಿಗೆ ಕಾಣಬಹುದು ಆ ದೇಶದಲ್ಲಿ ನನಗೆ ದುಃಖವುಂಟು ಮಾಡುವ ಮತ್ತು ನಾನು ಒಪ್ಪದ ಅನೇಕ ಸಂಗತಿಗಳು ನಡೆದಿವೆ ಆದಾಗ್ಯೂ ಅಲ್ಲಿ ಏರ್ಪಾಡಾಗುತ್ತಿರುವ ಹೊಸ ಪದ್ಧತಿಯು ಅವಶ್ಯಕವೂ ಹೊಸ ನಾಗರೀಕತೆಯೂ ನನ್ನನ್ನು ಆಕರ್ಷಿಸಿವೆ. ಭವಿಷ್ಯವು ಆಶಾದಾಯಕವಾಗಿದ್ದರೆ ಅದು ಮುಖ್ಯವಾಗಿ ಸೋವಿಯಟ್ ರಷ್ಯಾದ ಕಾರಣದಿಂದಲೇ ಅದು ಮಾಡಿರುತ್ತಿರುವ ಕೆಲಸಗಳ ಫಲದಿಂದಲೇ. ನನ್ನ ಮನಸ್ಸಿಗೆ ಮನವರಿಕೆಯಾಗಿರುವುದೇನೆಂದರೆ, ಪ್ರಪಂಚದಲ್ಲಿ ಏನಾದರೂ ಒಂದು ದೊಡ್ಡ ವಿಪತ್ತು ಸಂಭವಿಸದೆ ಇದ್ದರೆ ಈ ಹೊಸ ನಾಗರೀಕತೆಯ ಇತರ ದೇಶಗಳನ್ನು ಪ್ರವೇಶಿಸಿ ಯುದ್ಧದಗಳನ್ನು ಒಂಡವಾಳ ಪದ್ಧತಿಯಿಂದುಂಟಾಗಿರುತ್ತಿರುವ ಹೋರಾಟಗಳನ್ನೂ ತಪ್ಪಿಸುತ್ತದೆ.

ಈ ಹೊಸ ಪದ್ಧತಿಯು ಇಂಡಿಯಾಕ್ಕೆ ಯಾವಾಗ ಮತ್ತು ಯಾವ ರೀತಿಯಾಗಿ ಬರುವುದೆಂಬುದು ನಮಗೆ ಗೊತ್ತಿಲ್ಲ ಪ್ರತಿಯೊಂದು ದೇಶವೂ ಅದನ್ನು ತನ್ನ ಸ್ವಂತ ರೀತಿಯಲ್ಲಿ ತನಗೆ ಬೇಕಾದಂತೆ ರೂಪುಗೊಳಿಸಿ ತನ್ನ ರಾಷ್ಟ್ರೀಯ ಕಾಲವೂನಕ್ಕನುಗುಣವಾಗಿ ಹೊಂದಿಸಿಕೊಳ್ಳುವುದು. ಆದರೆ ಆ ಪದ್ಧತಿಯ ಮುಖ್ಯ ಸ್ವರೂಪವಾದ ಪ್ರಪಂಚದ ಪರಸ್ಪರ ಹೊಂದಿಕೆಯು ಉಳಿದೇ ಉಳಿಯುವುದು. ಅದು ಈಗಿನ ಅವ್ಯವಸ್ಥೆಯ ಸ್ಥಿತಿಯಿಂದ ಪಾರಾಗುವುದು.

ಈ ರೀತಿಯಾಗಿ 'ಸೋಷಿಯಲಿಸಂ' ನನಗೆ ಒಂದು ಆರ್ಥಿಕ ಸಿದ್ಧಾಂತವೇ ಅಲ್ಲ. ಅದು ಒಂದು ಮುಖ್ಯವಾದ ಧರ್ಮದ ತತ್ವ. ನಾನು ಅದನ್ನು ಬುದ್ಧಿಪೂರ್ವಕವಾಗಿಯೂ ಹೃತ್ಪೂರ್ವಕವಾಗಿಯೂ ನನ್ನದಾಗಿ ಮಾಡಿಕೊಂಡಿದ್ದೇನೆ ನನ್ನಲ್ಲಿರುವ ರಾಷ್ಟ್ರೀಯ ಭಾವವು ಪರಕೀಯ ಸತ್ತೆಯನ್ನು ಸಹಿಸಲಾರದ ಕಾರಣ ನಾನು ಭಾರತೀಯ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಕೆಲಸ ಮಾಡುತ್ತೇನೆ. ನಾನು ಅದಕ್ಕೇ ಇನ್ನೂ ಹೆಚ್ಚಾಗಿ ಕೆಲಸ ಮಾಡುತ್ತಿರುವುದು ಅದರಿಂದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯು ಉಂಟಾಗಬಹುದೆಂಬ ಕಾರಣದಿಂದ ನನಗೆ ಕಾಂಗ್ರೆಸು 'ಸೋಷಿಯಲಿಸ್ಟ್' ಸಂಸ್ಥೆಯಾಗಿ ಹೊಸ ನಾಗರೀಕತೆಗಾಗಿ ಕೆಲಸ ಮಾಡುತ್ತಿರುವ ಪ್ರಪಂಚದ ಇತರ ಶಕ್ತಿಗಳೊಂದಿಗೆ ಕೈಜೋಡಿಸಬೇಕೆಂಬುದು ನನ್ನ ಆಪೇಕ್ಷೆ. ಆದರೆ ಕಾಂಗ್ರೆಸು ಈಗ ರಚಿತವಾಗಿರುವಂತೆ ಅದರ ಬಹು ಸಂಖ್ಯಾತರು ದೂರ ಹೋಗಲಾರರು ಎಂಬುದನ್ನು ನಾನು ತಿಳಿದಿದ್ದೇನೆ ನಮ್ಮದು ರಾಷ್ಟ್ರೀಯ ಸಂಸ್ಥೆ. ನಾವು ಆ ರಾಷ್ಟ್ರೀಯ ತತ್ವದ ಮೇಲೆ ಆಲೋಚನೆ ಮಾಡುತ್ತೇವೆ ಮತ್ತು ಕೆಲಸ ಮಾಡುತ್ತೇವೆ. ನಾವು ನಿಯಮಿತ ಗುರಿಯಾಗಿಟ್ಟುಕೊಂಡಿರುವ ರಾಜಕೀಯ ಸಂಪೂರ್ಣ ಸ್ವಾತಂತ್ರ್ಯತೆಗೂ ಇದೂ ಬಹಳ ಹ್ರಸ್ವವಾದುದೆಂದು ನನಗೆ ಸ್ಪಷ್ಟವಾಗುತ್ತಿದೆ. ಅದಕ್ಕಾಗಿಯೇ ನಾವು ಜನಸಮುದಾಯದ ಮೂಲಕ ಕಾರ್ಯನಾಡುತ್ತೇವೆ. ಮತ್ತು ಅವರ ಆರ್ಥಿಕ ಅವಶ್ಯಕತೆಗಳ ವಿಷಯವನ್ನು ಹೇಳುತ್ತೇವೆ. ಆದರೆ ನಮ್ಮಲ್ಲಿ ಬಹು ಜನರು ಇನ್ನೂ ಹಿಂಜರಿಯುತ್ತೇವೆ. ಏತಕ್ಕೆಂದರೆ ನಮ್ಮ ರಾಷ್ಟ್ರೀಯ ಭಾವನೆಯಿಂದ ಪ್ರೇರೇಪಿತರಾಗಿ ಕೆಲವು ಕಾರಿಡಲ್ಪಟ್ಟ ಹಿತಗಳುಳ್ಳವರು ಹೆದರಿ ಓಡಿಯಾರೆಂಬ ಭೀತಿಯಿಂದ ನಾವು ಮುಂದೆ ಹೆಜ್ಜೆ ಹಾಕುತ್ತಿಲ್ಲ. ಈ ಕಾರಿಡಲ್ಪಟ್ಟ ಹಿತಗಳಲ್ಲಿ ಅನೇಕವು ಈಗಾಗಲೇ ನಮಗೆ ವಿರೋಧವಾಗಿ ಸಜ್ಜುಗೊಳಿಸಿ ನಿಂತಿವೆ. ಅವುಗಳಿಂದ ನಾನು ಏನನ್ನೂ ನಿರೀಕ್ಷಿಸಲಾರೆವು. ರಾಜಕೀಯ ಸಂಗ್ರಾಮದಲ್ಲಿಯೂ ಕೂಡ ಅವುಗಳಿಂದ ವಿರೋಧವನ್ನು ಹೊರತಾಗಿ ಬೇರೆ ಏನನ್ನೂ ನಿರೀಕ್ಷಿಸುವ ಹಾಗಿಲ್ಲ.

ಕಾಂಗ್ರೆಸನ್ನು ನಾನು ಒತ್ತಾಯಗೊಳಿಸುವುದಿಲ್ಲ.

ಈ ದೇಶದಲ್ಲಿ 'ಸೋಷಿಯಲಿಸಂ' ಮುಂದೆ ಬೆಳೆಯಬೇಕೆಂದು ನಾನು ಎಷ್ಟೇ ಅಪೇಕ್ಷಿಸಿದಾಗ್ಯೂ ನನ್ನ ಅಪೇಕ್ಷೆಯನ್ನು ಕಾಂಗ್ರೆಸಿನ ಮೇಲೆ ಒತ್ತಿ ನಮ್ಮ ಸಂಪೂರ್ಣ ಸ್ವಾತಂತ್ರ್ಯ ಜಳವಳಕ್ಕೆ ಅಡ್ಡಿಯನ್ನು ತಂದು ಹಾಕುವ ಅಪೇಕ್ಷೆಯು ನನಗಿಲ್ಲ. ಯಾರು ಯಾರು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಕೆಲಸ ಮಾಡುವರೋ ಅವರು 'ಸೋಷಿಯಲಿಸ್ಟ್' ಸಿದ್ಧಾಂತವನ್ನು ಒಪ್ಪದಿದ್ದಾಗ್ಯೂ ಕೂಡ ನಾನು ಅವರೊಡನೆ ಸಹಕರಿಸಿ ಸಂತೋಷವಾಗಿ ಕೆಲಸ ಮಾಡಲು ಸಿದ್ಧನಾಗಿದ್ದೇನೆ ಹೀಗೆ ಮಾಡುವುದರಲ್ಲಿ ನಾನು ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿ ಕಾಲಕ್ರಮದಲ್ಲಿ ಕಾಂಗ್ರೆಸನ್ನು ತನ್ಮೂಲಕ ದೇಶವನ್ನೂ ನನ್ನಂತೆ ತಂದುಗಿಳಿಕೊಳ್ಳಲು ಯತ್ನಿಸುತ್ತೇನೆ. ಏಂದರೆ ಸಂಪೂರ್ಣ ಸ್ವಾತಂತ್ರ್ಯವನ್ನು ಸಾಧಿಸಲು ಅದೇ ಮಾರ್ಗ. ಅದುದರಿಂದ ಸಾಮಾಜಿಕ ವಿಷಯಗಳ ಮೇಲೆ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಸಂಪೂರ್ಣ ಸ್ವಾತಂತ್ರ್ಯದಲ್ಲಿ ವಿಶ್ವಾಸವಿರುವವರೆಲ್ಲರೂ ಒಟ್ಟಿಗೆ ಸೇರಲು ಸಾಧ್ಯವಿದೆ ಕಾಂಗ್ರೆಸು ಹಿಂದೆ ಅನೇಕ ಅಭಿಪ್ರಾಯಗಳ ಒಟ್ಟುಗೂಡುವಿಕೆಯ ಸಮಾನಕಟ್ಟಿನ ಣಾಗ್ರಣವಾಗಿತ್ತು. ಈಗಲೂ ಅಭಿಪ್ರಾಯ ಭೇದಗಳು ಇನ್ನೂ ಹೆಚ್ಚು ಸ್ಪಷ್ಟವಾಗಿದ್ದರೂ ಐಕಮತ್ಯದ ಣಾಗ್ರವು ಕಾಂಗ್ರೆಸಿನಲ್ಲಿ ಕಂಡುಬರಬೇಕು.

ಖಾದಿ ಮತ್ತು ಗ್ರಾಮ ಕೈಗಾರಿಕೆಗಳು.

ಖಾದಿ ಮತ್ತು ಗ್ರಾಮ ಕೈಗಾರಿಕೆಗಳನ್ನು ತಾತ್ಕಾಲಿಕವಾದ ಹಂಗಾಮಿಯಾದ ಪರಿಹಾರಗಳೆಂದು ನಾನು ಭಾವಿಸುತ್ತೇನೆ. ಅವು ನಮ್ಮ ಮುಖ್ಯವಾದ ಸಮಸ್ಯೆಗಳನ್ನು ಪರಿಹರಿಸುವದಿಲ್ಲ. ಈ ಮಧ್ಯ ಕಾಲಸ್ಥಿತಿಯು ಬಹಳ ಕಾಲದ ವರೆಗೆ ಇರಬಹುದು. ಇಂಡಿಯಾದಂತಹ ದೇಶದಲ್ಲಿ ಗ್ರಾಮ ಕೈಗಾರಿಕೆಗಳು ಒಂದು ಮುಖ್ಯವಾದ ಪಾತ್ರವನ್ನು ವಹಿಸುವುವು ಕೈಗಾರಿಕೆಗಳ ಬೆಳವಣಿಗೆಯಲ್ಲಿ ಎಂಡನೆಯ ಸ್ಥಾನವನ್ನು ಪಡೆಯಬಹುದು ನಾನು ಗ್ರಾಮ ಕೈಗಾರಿಕೆಗಳ ಕಾರ್ಯಕ್ರಮದಲ್ಲಿ ಸಹಕರಿಸಿದ್ದಾಗ್ಯೂ, ಅವುಗಳ ವಿಷಯದಲ್ಲಿ ನನ್ನ ಮನೋಭಾವವು ಕಾಂಗ್ರೆಸ್ಸಿನವ್ವರಿಗೆ ಅನೇಕರಿಂದಲೂ ಭಿನ್ನವಾದುದು. 'ಇಂಡಸ್ಟ್ರಿಯಲೈಸೇಷನ್' ಮತ್ತು 'ಸೋಷಿಯಲಿಸಮಿನಲ್ಲಿ ಅವರಿಗೆ ವಿಶ್ವಾಸವಿಲ್ಲ. ಅದಕ್ಕೆ ಅವರು ವಿರೋಧಿಗಳು.

ಹರಿಜನ ಸಮಸ್ಯೆ.

ಅಸ್ಪೃಶ್ಯತಾ ನಿವಾರಣಾ ಸಮಸ್ಯೆ ಮತ್ತು ಹರಿಜನೋದ್ಧಾರವೂ ಬೇರೆ ರೀತಿಯಾಗಿ ಪರಿಗಣಿಸಲ್ಪಡಬಹುದು. ಒಬ್ಬ ಸೋಷಿಯಲಿಸ್ಟಿಗೆ ಇದು ಯಾವ ತೊಡಕನ್ನೂ ಉಂಟು ಮಾಡುವುದಿಲ್ಲ. ಏಂದರೆ ಸೋಷಿಯಲಿಸಮಿನಲ್ಲಿ ಈ ತರದ ವ್ಯತ್ಯಾಸವಾಗಲೀ, ಹಿಂಸೆಯಾಗಲೀ ಇರುವುದಿಲ್ಲ. ಆರ್ಥಿಕವಾಗಿ ಮಾತನಾಡಿದರೆ ಹರಿಜನರು ಭಾರವು ಕಾಣಾಗಳಿಲ್ಲದ 'ಪ್ರೋಲೇಟೇರಿಯೆಟ್' ಎಂದರೆ ಸಾಮಾನ್ಯ ಕೃಷಿ ಮಾಡುವ ಪ್ರಜಾ ಸಮುದಾಯ. ಸೋಷಿಯಲಿಸಮಿನ ಆರ್ಥಿಕ ಬದಲಾವಣೆಯಿಂದ ಸಮಾಜ ಪದ್ಧತಿಗಳಿಂದಲೂ, ಸಂಪ್ರದಾಯಗಳಿಂದಲೂ ಹೆಣೆಯಲ್ಪಟ್ಟಿರುವ ಸಾಮಾಜಿಕ ಕಟ್ಟುಗಳು ಹುಡಿ ಹುಡಿ ಹೋಗುವವು

'ಇಂಡಿಯಾ ಆಕ್ಟ್'.

ನಾನು ಈಗ ನಿಮ್ಮ ಮನಸ್ಸಿನಲ್ಲಿ ಮುಖ್ಯವಾಗಿ ಆಕ್ಟ್ ಮಾಡಿರುವ 'ಇಂಡಿಯಾ ಆಕ್ಟ್' ವಿಷಯಕ್ಕೆ ಬರುತ್ತೇನೆ. ಬ್ರಿಟಿಷ್ ಪಾರ್ಲಿಮೆಂಟು ಅದನ್ನು ಶಾಸನವನ್ನಾಗಿ ಮಾಡಿತು. ಅದರ ಬಗ್ಗೆ ನಮ್ಮ ನೀತಿಯನ್ನು ನಿರ್ಧರಿಸಬೇಕು. ಹೋದ ಸಾರಿ ಕಾಂಗ್ರೆಸ್ಸು ಸೇರಿದಾಗ ಈ ಆಕ್ಟ್ ಶಾಸನವಾಗಿರಲಿಲ್ಲ. ಅವಾಗ್ಯೂ ಅದರಲ್ಲಿ ಏನು ಬರಬಹುದೆಂಬುದು ಶ್ವೇತ ಪತ್ರ ವ್ಯಕ್ತವಾಯಿತು. ಕಾಂಗ್ರೆಸಿನ ಹೋದ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ಹೊಸ ರಾಜ್ಯಾಂಗವನ್ನು ಅತ್ಯಂತ ಜೀವನ್ನಾಗಿ ಟೀಕಿಸಿದ್ದಾರೆ.

ಹೊಸ ರಾಜ್ಯಾಂಗವು ಈಗ ಇರುವ ಪದ್ಧತಿಗಿಂತಲೂ ಹೆಚ್ಚು ಪ್ರಗತಿ ವಿರೋಧವಾದುದು, ಮುಂದಗಾವಿಗಳೂ ಅದನ್ನು ಬಹುವಾಗಿ ಖಂಡಿಸಿದ್ದಾರೆ ನಾವು ಶ್ವೇತಪತ್ರವನ್ನೇ ತಿರಸ್ಕರಿಸಿದ ಮೇಲೆ ದಾಸ್ಯದ ಈ ಹೊಸ ಶಾಸನದಿಂದ ನಮಗೇನು ಪ್ರಯೋಜನ? ಅದು ಸಾಮಾನ್ಯ ಅಧಿಕಾರದ ಸಾಧ್ಯಗಳನ್ನು ಬಿಗಿ ಮಾಡಿ ನಮ್ಮ ಜನತೆಯ ಸೂರಿಗೆ ಹೆಚ್ಚು ಅವಕಾಶವನ್ನುಂಟುಮಾಡುತ್ತದೆ ಆ ಶಾಸನಸಭೆಯಲ್ಲಿ ಏನಿರುವುದೆಂಬುದನ್ನು ಕ್ಷಣಕಾಲ ಮರೆತು ಅದರ ಜತೆಯಲ್ಲಿ ನಮಗುಂಟಾದ ಅವಮಾನವನ್ನು, ನೋವನ್ನು ನಾವು ಹೇಗೆ ಮರೆಯಬಲ್ಲೆವು? ನಮ್ಮ ಆಶೆಗಳನ್ನು ಪ್ರತಿಭಟಿಸಿ ನಮ್ಮ ನ್ಯಾಯವಾದ ಸ್ವಾತಂತ್ರ್ಯಗಳನ್ನು ತುಳಿದು ದೇಶದಲ್ಲೆಲ್ಲಾ ಭಯಂಕರವಾದ ದಬ್ಬಾಳಿಕೆಯನ್ನು ಹೂಡಿ ನಮಗೆ ನಾವಾಗಿ ಕಷ್ಟಗಳನ್ನ ಕೊಡಲಿಲ್ಲವೇ? ನಮಗೆ ಈ ರೀತಿಯೊಡ ಅಪಮಾನ ಮಾಡಿ ಅವಮಾನಗೆ ಸ್ವರ್ಗದ ಕಿರೀಟವನ್ನೇ ಕೊಟ್ಟಿದ್ದರೂ ಕೂಡ ಅದು ನಮ್ಮ ರಾಷ್ಟ್ರೀಯ ಗೌರವಕ್ಕೂ, ಆತ್ಮ ಮರ್ಯಾದೆಗೂ ವಿರೋಧವಾಗುವುದೆಂದೂ ಆ ಕಿರೀಟವನ್ನು ಹಾಗೆಯೇ ಕಾಲಿನಿಂದ ಒದೆಯುತ್ತಿರಲಿಲ್ಲವೆ? ಎಂದ ಮೇಲೆ ಈ ಹೊಸ ರಾಜ್ಯಾಂಗವು ವಿಷಯಕ್ಕೆ ಭಿನ್ನವಾದ ನೀತಿಯೇತಕ್ಕೆ?

ಈ ಗುಲಾಮಗಿರಿಯ ಶಾಸನವು ಗುಲಾಮರಿಗೇ ಕಾನೂನಾಗಲಾರದು. ಅದಕ್ಕೆ ಬಲಾತ್ಕಾರವಾಗಿ ನಾವು ತರೆ ಬಗ್ಗಿಸಿದಾಗಲ್ಯ ಆರ್ಡಿನೆನ್ಸುಗಳೇ ಮುಂತಾದ್ದಕ್ಕೆ ಗುರಿಯಾದ್ದಾಗ್ಯೂ ಆ ಶಾಸನವನ್ನು ಕೊನೆಗಾಣಿಸಲೂ, ಅದನ್ನು ವಿರೋಧಿಸಲೂ ನನಗೆ ಹಕ್ಕಿದೆ.

ನಮ್ಮ ಲಾಯರುಗಳು ಈ ಹೊಸ ರಾಜ್ಯಾಂಗವನ್ನು ಪರೀಕ್ಷಿಸಿ ಖಂಡಿಸಿದ್ದಾರೆ. ರಾಜ್ಯಾಂಗ ಶಾಸನಗಳು ಕೇವಲ ಕಾನೂನಿನ ಕಡತಗಳಲ್ಲ ಫಂಡ್‌ಮೆಂಟಲ್ ಲಾಸೆಲ್ಫ್ ಎಂಬವರು ಹೇಳಿರುವಂತೆ ನಿಜವಾದ ಶಾಸನದಲ್ಲಿ ಅಧಿಕಾರದ ಪರಸ್ಪರ ಸಂಬಂಧವಿರುತ್ತದೆ. ಆ ಅಧಿಕಾರದ ಕೆಲಸವನ್ನು ನಾವು ನೋಡುತ್ತೇವೆ. ನಾವು ಈಗ ಎದುರಿಸಬೇಕಾಗಿರುವುದು ಸುಂದರವಾದ ಶಬ್ದ ಸಮೂಹವಲ್ಲ. ಬಲವಾದ ರಾಜ್ಯಾಂಗ ಶಾಸನ. ಅದನ್ನು ನಮ್ಮ ದೇಶವು ಜನಗಳ ಶಕ್ತಿಯಿಂದಲೇ ಎದುರಿಸಬೇಕು.

ಚುನಾವಣೆಗೆ ನಿಲ್ಲಬೇಕು.

ಈಗಿನ ಪರಿಸ್ಥಿತಿಯಲ್ಲಿ ಹೊಸ ಪ್ರಾಂತಿಕ ಶಾಸನ ಸಭೆಗಳ ಚುನಾವಣೆಗಳಲ್ಲಿ ಅವು ನಡೆದರೆ, ನಾವು ಪ್ರತಿ ಸ್ಪರ್ಧೆ ಮಾಡದೆ ಗತ್ಯಂತರವೇ ಇಲ್ಲ. ನಾವು ಒಂದು ವಿಶಾಲವಾದ ರಾಜಕೀಯ ಮತ್ತು ಆರ್ಥಿಕ ಕಾರ್ಯಕ್ರಮವನ್ನು ಹಾಕಿಕೊಂಡು ನಮ್ಮ ಬೇಡಿಕೆಗಳಲ್ಲಿ ಮುಂದೆ ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯನ್ನಿಟ್ಟುಕೊಂಡು ಚುನಾವಣೆಗೆ ಉಮೇದುವಾರರಾಗಿ ನಿಲ್ಲಬೇಕು. ನಮ್ಮ ರಾಜಕೀಯ ಮತ್ತು ಕೋಮುವಾರು ಸಮಸ್ಯೆಗಳಿಗೆ ಪರಿಹಾರವು ಆ ಅಸೆಂಬ್ಲಿಯಿಂದ ದೊರೆಯುತ್ತದೆ. ಎಂಬುದು ನನ್ನ ಮನವರಿಕೆ. ಆದರೆ ಇಡೀ ಪ್ರಜಾ ಸಮುದಾಯದಲ್ಲಿ ಪ್ರಬುದ್ಧರಾದ ಸರ್ವರಿಗೂ ಆ ಅಸೆಂಬ್ಲಿಗೆ ಸದಸ್ಯರನ್ನು ಚುನಾಯಿಸುವ ಅಧಿಕಾರವಿರಬೇಕು.

'ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿ'.

ನಮ್ಮ ರಾಜ್ಯಾಂಗ ರಚನೆಯನ್ನು ರಚಿಸಲು ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯೇ ಯುಕ್ತವಾದ ಮತ್ತು ಪ್ರಜಾ ಪ್ರಭುತ್ವ ರೀತಿಯೂದ ಮಾರ್ಗ. ಅದರ ಪ್ರತಿನಿಧಿಗಳು ಅನಂತರ ಬ್ರಿಟಿಷ್ ಸರಕಾರದ ಪ್ರತಿನಿಧಿಗಳೊಂದಿಗೆ ಒಂದು ಒಪ್ಪಂದಕ್ಕಾಗಿ ವ್ಯವಹಾರ ನಡೆಸುವರು ನಾವು ಅದನ್ನು ಖಾಲಿ ಮನಸ್ಸಿನಿಂದ ಪ್ರವೇಶಿಸಲಾರೆವು.

(8ನೇ ಪುಟಕ್ಕೆ ಸಾಗಿದೆ.)

ಕೊಡಗು

ಮೇ ತಾ. ೧ ನೇ ಶುಕ್ರವಾರ ೧೯೩೭.

ಕೊಡಗಿನ ಗತಿಯೇನು?

ಕೊಡಗು ಪ್ರಾಂತ್ಯವು ಹಿಂದೂ ದೇಶದ ಹೊರಗಾಗಿ ಬಿಟ್ಟಿದೆಯೋ? ಅದರ ಸರ್ಕಾರದ ಸುಧಾರಣೆಗಾಗಿ ಪ್ರತ್ಯೇಕ ಹೋರಾಟವನ್ನು ನಡಿಸಬೇಕಾಗಿದೆಯೊ? ಎಂಬ ಸಂಶಯವು ಈ ಪ್ರಾಂತ್ಯದವಕ ಮನಸ್ಸಿಗೆ ಉಂಟಾಗುತ್ತಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಇದಕ್ಕೆ ತಕ್ಕ ಕಾರಣಗಳೂ ಇವೆ. ಇಂಡಿಯಾದ ಹೆಚ್ಚಿನ ಭಾಗವು ಹೇಗೆ ನೇರವಾ ಬ್ರಿಟಿಷರ ಆಡಳಿತದಲ್ಲಿದೆಯೋ ಹಾಗೆಯೇ ಈ ಪ್ರಾಂತ್ಯವೂ ಈಗ ಒಂದು ಶತಮಾನದಿಂದ ಬ್ರಿಟಿಷರಿಂದ ಆಳಲ್ಪಡುತ್ತಿದೆ. ಈ ಪ್ರಾಂತ್ಯವು ವಿಸ್ತೀರ್ಣದಲ್ಲಿಯೂ, ಜನಸಂಖ್ಯೆಯಲ್ಲಿಯೂ ಮತ್ತು ಉತ್ಪತ್ತಿಯಲ್ಲಿಯೂ ಬಹು ಚಿಕ್ಕದಾದರೂ ಕೂಡ ಬ್ರಿಟಿಷ್ ಸರ್ಕಾರದವಕು ಇದನ್ನು ಇಷ್ಟರ ವರೆಗೆ ಪ್ರತ್ಯೇಕ ಪ್ರಾಂತ್ಯವಾಗಿಯೇ ಇಟ್ಟಿರುವರು. ಇದಕ್ಕೆ—ಇಲ್ಲಿಯ ನಿವಾಸಿಗಳ ವ್ಯಕ್ತಿತ್ವವೋ, ರಾಜಭಕ್ತಿಯೋ ಯಾ ಈ ದೇಶದ ಪ್ರಕೃತಿಯ ಲಕ್ಷಣಗಳೋ ಅಥವಾ ಇಲ್ಲಿ ಹೆಚ್ಚಾಗಿರುವ ಯೂರೋಪಿಯನ್ ಕಾಫಿ ಪ್ಲಾಂಟರುಗಳ ಹಿತದ ದೃಷ್ಟಿಯೋ—ಇವುಗಳಲ್ಲಿ ಯಾವುದಾದರೊಂದು ಯಾ ಎಲ್ಲವೂ ಕಾರಣಗಳಾಗಿರಬಹುದು. ಆದರೆ ಕೊಡಗಿನ ಪ್ರತ್ಯೇಕತ್ವವು ಅದರ ರಾಜಕೀಯ ಸುಧಾರಣೆಗೆ ಅಡ್ಡಿ ಒದಗುವುದೆಂದು ಯಾರೂ ಯೋಚಿಸಿಲ್ಲ.

ಬ್ರಿಟಿಷರು ಹೇಳಿಕೆಯಂತೆಯೇ ಹಿಂದೂ ದೇಶದ ಬೇರೆ ಪ್ರಾಂತ್ಯಗಳ ಜನರು ಹೇಗೆ ಸ್ವರಾಜ್ಯ ಸರ್ಕಾರವನ್ನು ನಡಿಸಲು ತರಬೇತು ಹೊಂದುತ್ತಾ ಬಂದರೋ ಹಾಗೆಯೇ ಇಲ್ಲಿಯವರೂ ತರಬೇತು ಹೊಂದುತ್ತಾ ಬಂದಿರುತ್ತಾರೆ. ವಿದ್ಯಾಭ್ಯಾಸದಲ್ಲಿ ಇಲ್ಲಿಯವರು ಬೇರೆಯವರಿಗಿಂತ ಹಿಂದೆ ಬಿದ್ದಿರುವುದಿಲ್ಲ. ಇಲ್ಲಿಯ ಗ್ರಾಮಗಳಲ್ಲಿರುವ ಜನಸಾಮಾನ್ಯರ ತಿಳುವಳಿಕೆಯು ಹೊರ ಪ್ರಾಂತ್ಯದ ಗ್ರಾಮಸ್ಥರುಗಳ ತಿಳುವಳಿಕೆಗಿಂತ ಕಡಮೆಯಲ್ಲ. ಆಡಳಿತ ಕ್ರಮದಲ್ಲಿ ದೇಶೀಯರು ತಮ್ಮ ಬುದ್ಧಿಶಕ್ತಿಯನ್ನೂ, ಚಾತುರ್ಯವನ್ನೂ ಬ್ರಿಟಿಷರು ಮನ ಒಪ್ಪುವಂತೆ ತೋರಿಸಿ ಅಧಿಕಾರದ ಅತ್ಯಂತ ಮೇಲಂತಸ್ತಿನ ವರೆಗೂ ತಲಪಿಸುವರು. ಜನರು ತಮ್ಮ ಓಟಿನ ಬೆಲೆಯನ್ನು ಚೆನ್ನಾಗಿ ಅರಿತುಕೊಂಡು ದೇಶದ ಆಡಳಿತ ನಡೆಸುವುದರಲ್ಲಿ ತಮಗಿರುವ ಅಭಿಪ್ರಾಯವನ್ನು ವಿಶೇಷವಾಗಿ ವ್ಯಕ್ತಪಡಿಸಿರುವರು. ಜನರ ಪ್ರತಿನಿಧಿಗಳು ನ್ಯಾಯವಿಧಾಯಕ ಸಭೆಯಲ್ಲಿ ದೇಶದ ಸರ್ಕಾರ ಕ್ರಮದಲ್ಲಿ ತಮಗಿರುವ ಪರಿಜ್ಞಾನವನ್ನು ಸ್ಥಳಾಧಿಕಾರಿಗಳಿಗೆ ತೃಪ್ತಿಯಾಗುವಂತೆ ಪ್ರದರ್ಶಿಸಿರುವರು. ಹೊರಗಡೆ, ಸ್ವಾತಂತ್ರ್ಯ ಹೋರಾಟದಲ್ಲೂ ಇಲ್ಲಿಯವರು ಹಿಂದೆ ಬಿದ್ದಿರುವುದಿಲ್ಲ. ದೇಶದ ಕಲ್ಯಾಣಕ್ಕಾಗಿ ಯುವಕ ಸಮುದಾಯವು ಯೋಗ್ಯತಾ ರೀತಿ ತನ್ನ ತ್ಯಾಗ ಬುದ್ಧಿಯನ್ನು, ಕಷ್ಟ ಸಹಿಷ್ಣುತೆಯನ್ನೂ ತೋರಿಸಿರುವರು ಅದರ ಮೇಲೆ ಈ ಪ್ರಾಂತ್ಯದವರು ಇತರ ಬ್ರಿಟಿಷ್ ಪ್ರಾಂತ್ಯಗಳವರಿಗಿಂತ ಯಾವ ವಿಧದಲ್ಲೂ ಹಿಂದೆ ಬಿದ್ದಿರುವಂತೆ ಕಾಣುವುದಿಲ್ಲ. ಆದರೆ ರಾಜಕೀಯ ಸುಧಾರಣೆಯ ವಿಷಯದಲ್ಲಿ ಮಾತ್ರ ಬ್ರಿಟಿಷರು ಕೊಡಗನ್ನು ಪೂರ್ಣ ಮರೆತಿರುವರು.

ಹಿಂದೂ ದೇಶದ ಉದ್ದಗಲಕ್ಕೆ ನಡೆದ ಕಳೆದ ಏಳು ವರ್ಷಗಳ ಹೋರಾಟದ ಫಲಿತಾಂಶವಾಗಿಯೂ, ದೇಶೀಯರಲ್ಲಿ ಉಂಟಾಗಿರುವ ತೀವ್ರವಾದ ಅತೃಪ್ತಿಯನ್ನು ಹೋಗಲಾಡಿಸುವುದಕ್ಕಾಗಿಯೂ ಬ್ರಿಟಿಷ್ ಸರ್ಕಾರದವರು ಭಾರತ ಭೂಮಿಗೆ ಹೊಸ ರಾಜಕೀಯ ಸುಧಾರಣೆಗಳನ್ನು ಕೊಡುವಂಥ ಬಿಲ್ಲೊಂದನ್ನು ತಮ್ಮ ಪಾರ್ಲಿಮೆಂಟ್ ಸಭೆಗಳಲ್ಲಿ ಪಾಸು ಮಾಡಿ ಅಕ್ಟಿನ ರೂಪಕ್ಕೆ ತಂದಿರುವರು. ಈ ಅಕ್ಟಿನ ಮೇರೆ ಹಿಂದೂ ದೇಶದ ಮೇಲೆ ಹೊರಿಸಲ್ಪಡುವ ಸುಧಾರಣೆಗಳ ಅತೃಪ್ತಿಕರವೆಂದು ಭಾರತ ನಿವಾಸಿಗಳು ಅಭಿಪ್ರಾಯ ಸೂಚಿಸಿದ್ದರೂ ಕೂಡ ಆ ಸುಧಾರಣೆಗಳು ಬೇಗನೆ ಜಾರಿಗೆ ತರಲ್ಪಡಲಿರುವವು. ಈ ಅಕ್ಟಿನ ಮೇರೆ ಪ್ರಾಂತ್ಯಗಳಲ್ಲಿ ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರವು ಸ್ಥಾಪಿಸಲ್ಪಡುವುದು. ಹಿಂದೂದೇಶದ ಸಾಮಂತ ರಾಜರುಗಳಲ್ಲಿ ಶೇಕಡ 50ಷ್ಟು ಜನ ಸಂಖ್ಯೆಯನ್ನಾಳುವ ರಾಜರುಗಳು ಒಪ್ಪಿದರೆ ಕೇಂದ್ರ ಸಂಯುಕ್ತ ಸರ್ಕಾರವು ಪ್ರಾರಂಭಿಸಲ್ಪಡುವದು. ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರದಲ್ಲಿ ಗವರ್ನರರಿಗೆ ಕಾದಿಡಲ್ಪಟ್ಟ ವಿಶೇಷ ಅಧಿಕಾರವು ಹೆಚ್ಚಾಗಿರುವುದರಿಂದ ಹೊಸ ಸುಧಾರಣೆಯಿಂದ ಹೆಚ್ಚಿನ ಪ್ರಯೋಜನವಾಗಲಾರದೆಂದು ಹಲವರ ಅಭಿಪ್ರಾಯವಾಗಿದೆ. ಹೇಗೂ ಈ ಸುಧಾರಣೆಯ ಸರ್ಕಾರವನ್ನು ಜಾರಿ ತರಲು ದೊಡ್ಡ ಪ್ರಾಂತ್ಯಗಳಲ್ಲಿ ಏರ್ಪಾಡುಗಳು ನಡೆಯುತ್ತಿವೆ. ನಮ್ಮ ನೆರೆ ಪ್ರಾಂತ್ಯವಾದ ಮದ್ರಾಸಿನಲ್ಲಿ ಹೊಸ ಕವುನ್ಸಿಲು ಚುನಾವಣೆಗಾಗಿ ಓಟರುಗಳ ಪಟ್ಟಿಯು ಒರುವ ಒಲೈ ಅಂತ್ಯದೊಳಗೆ ತಯಾರು ಮಾಡಲ್ಪಡುವುದೆಂದೂ, ಅದರ ತಿದ್ದುಪಡಿಯೂಗಿ ಆಖೈರು ಪಟ್ಟಿಯು ಪ್ರಕಟವಾಗಿ ಚುನಾವಣೆಯು 1937 ನೇ ಫೆಬ್ರುವರಿ ಮಧ್ಯದಲ್ಲಿ ನಡೆಯಬಹುದೆಂದೂ ವರ್ತಮಾನವಿದೆ. ಹೆಚ್ಚು ಕಮ್ಮಿ ಹೀಗೆಯೇ ಇತರ ಪ್ರಾಂತ್ಯಗಳಲ್ಲೂ ಆಗಬಹುದು.

ಆದರೆ ಕೊಡಗಿನ ಗತಿಯೂದರೂ ಏನು? ಈ ಪ್ರಶ್ನೆಗೆ ಉತ್ತರವೇ ದೊರೆಯುವುದಿಲ್ಲ. 1910 ನೇ ಇಸವಿಯಿಂದ ಕೊಡಗಿನವರೂ ಕಂಣು ತೆರೆದು ತಮಗೆ ಬೇಕಾದ ರಾಜಕೀಯ ಸುಧಾರಣೆಗಳಿಗಾಗಿ ಹೋರಾಟವನ್ನು ನಡೆಸುತ್ತಾ ಬಂದಿರುವರು. ಸೈಮನ್ ಕಮಿಷನಿನ ಮುಂದೆ ತಮ್ಮ ಕೋರಿಕೆಗಳನ್ನಿಟ್ಟರು. ಇಂಗ್ಲೆಂಡಿನಲ್ಲಿ ನಡೆದ ದುಂಡು ಮೇಜು ಪರಿಷತ್ತಿನಲ್ಲಿಯೂ ಈ ಪ್ರಾಂತ್ಯದವರು ಅಭಿಲಾಷೆಗಳನ್ನು ತಿಳಿಸುವಂಥ ಏರ್ಪಾಡು ಮಾಡಲಾಗಿತ್ತು. ನಂತರ ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಗೂ ಈ ದೇಶದವರ ಕಾಂಕ್ಷೆಗಳನ್ನೊಳಗೊಂಡ ಜ್ಞಾಪಕ ಪತ್ರವು ಕಳುಹಿಸಲಾಯಿತು. ಈ ಕಾರ್ಯಗಳನ್ನೆಲ್ಲಾ ನಡೆಸಲು ಕೊಡಗಿನ ಪ್ರಾಮುಖ್ಯ ರಾಜಕೀಯ ಸಂಸ್ಥೆಯೂದ ಜಮಾನಾದ್ದಾರರ ಸಂಘವೇ ಮುಖ್ಯ ಕಾರಣ. ಇಂಡಿಯಾ ಸುಧಾರಣೆಗಳನ್ನೊಳಗೊಂಡ ಶ್ವೇತ ಪತ್ರವು ಪ್ರಕಟವಾದಾಗ್ಯೆ ಅದರಲ್ಲಿ ಕೊಡಗಿನ ಸುಧಾರಣೆಯ ವಿಷಯವೇನೂ ಇರಲಿಲ್ಲ ಇದನ್ನು ನೋಡಿ ನಿರಾಶಿತರಾಗಿ ಜಮಾನಾದ್ದಾರರ ಸಂಘದವರು ಜೀಫ್ ಕಮಿಷನರಲ್ಲಿಗೆ ಡೆಪ್ಯುಟೇಶನ್ ಹೋದಾಗ್ಯೆ ಪಾರ್ಲಿಮೆಂಟಿನ ಮುಂದೆ ಬರುವ ಮಸೂದೆಯಲ್ಲಿ ಕೊಡಗಿನ ಸುಧಾರಣೆಗಳು ಕಾಣಿಸಲ್ಪಡುವದೆಂದು ಭರವಸೆಯನ್ನಿತ್ತರು ಆದರೆ ಆ ಮಸೂದೆಯಲ್ಲಿ ಕೊಡಗಿಗೆ ಯಾವ ತರಹದ ಸುಧಾರಣೆಗಳ ಸೂಚನೆಯನ್ನೂ ಮಾಡದೆ ಮುಂದಕ್ಕೆ ಕೊಡಗಿಗೆ ಸುಧಾರಣೆಗಳನ್ನು ಕೊಡುವ ಅಧಿಕಾರವನ್ನು ಬ್ರಿಟನ್ನಿನ ರಾಜರು ವೈಸ್ರಾಯ್ ಅವರ ಮಂತ್ರಿ ಮಂಡಳಿಗೆ ಕೊಡುವ ಶಾಸ್ತ್ರ ಮಾತ್ರವಿದೆ ಬರೀ ಈ ಶಾಸ್ತ್ರದಿಂದ ಇಲ್ಲಿಯ ಜನರಿಗೆ ತೃಪ್ತಿಯಾಗದು.

ಇಂಡಿಯಾ ಆಕ್ಟ್ ಆದ ಮೇಲೆ, ಇಲ್ಲಿಗೆ ಯಾವ ತರಹದ ಸುಧಾರಣೆಯನ್ನು ಕೊಡಬಹುದೆಂಬುದನ್ನು ವಿಚಾರಿಸಲು ಇಂಡಿಯಾ ಸರ್ಕಾರದವರು ಒಬ್ಬ ಆಫೀಸರನ್ನು ಇಲ್ಲಿಗೆ ಕಳುಹಿಸುವರೆಂದು ಇಲ್ಲಿಯ ಸ್ಥಳೀಕ ಅಧಿಕಾರಿಗಳು ತಿಳಿಯಪಡಿಸಿದರು. ಆದರೆ ಈ ವರೆಗೆ ಅಂಥಾ ವಿಚಾರಣೆಯೇನೂ ನಡಿಸಲ್ಪಟ್ಟಿರುವುದಿಲ್ಲ. ಇಂಡಿಯಾದ ಇತರ ಕಡೆಗಳಲ್ಲಿ ಹೊಸ ಸುಧಾರಣೆಗಳನ್ನು ಜಾರಿಗೆ ತರುವ ಏರ್ಪಾಡುಗಳು ಭರದಿಂದ ನಡೆಯುತ್ತಿರುವಾಗ್ಯೆ, ಯಾವ ವಿಧದಲ್ಲೂ, ಹಿಂದು ಬೀಳದೆ ಇರುವಂಥ ಕೊಡಗಿಗೆ ಯಾವ ತರಹದ ಸುಧಾರಣೆ ಕೊಡುವದೆಂಬುದನ್ನು ಅಲೋಚನೆ ಸಹ ಮಾಡದಿರುವದು ತುಂಬಾ ವಿಷಾದಕರವೂ, ಅನ್ಯಾಯವೂ ಆಗಿದೆ. ಈ ಸಂಬಂಧನಾಗಿ ದೇಶದವರು ತಮ್ಮ ಅತೃಪ್ತಿಯನ್ನೂ, ಅಸಮಾಧಾನವನ್ನೂ ಸಾಕಷ್ಟು ಬಲವಾಗಿ ಸೂಚಿಸಿದ್ದರೂ ಕೂಡ ಮೇಲಧಿಕಾರಿಗಳು ಅದಕ್ಕೆ ಗಮನ ಕೊಡದೆ ಇರುವುದು ವ್ಯಸನಕರ. ಜನರ ನ್ಯಾಯವಾದ ಕೋರಿಕೆಗಳ ಕಡೆ ನಿರ್ಲಕ್ಷ್ಯತೆಯನ್ನು ತೋರಿಸುತ್ತಿರುವುದು ಸ್ಥಳೀಯ ಸರ್ಕಾರದವರೋ ಯಾ ಮಧ್ಯವರ್ತಿ ಸರ್ಕಾರದವರೋ ಎಂಬುವುದು ಗೊತ್ತಾಗುವುದಿಲ್ಲ. ಒಂದು ವೇಳೆ ಈ ತಪ್ಪು ಇಂಡಿಯಾ ಸರ್ಕಾರದವಂದಾಗಿದ್ದರೆ ಸ್ಥಳೀಕ ಸರಕಾರದವರಿಗೆ ಈಗೊಂದು ಹೊಸ ಅವಕಾಶ ದೊರೆತ್ತಿದೆ. ಹಿಂದೂ ದೇಶದ ಹೊಸ ಆಡಳಿತ ರಚನೆಯು ಮುಖ್ಯ ಕರ್ತವ್ಯವಾದ ಲಾರ್ಡ್ ಲಿನ್‌ಲಿತ್‌ಗೊ ರವರೇ ಈಗ ಇಂಡಿಯಾದಲ್ಲಿ ಸೆವೈಸರಾಯರಾಗಿ ಒಂದಿರುವರು. ಇಷ್ಟರ ವರೆಗೆ ಚಿಕ್ಕದಾದರೂ ಒಂದು ಪ್ರತ್ಯೇಕ ಪ್ರಾಂತ್ಯವಾದ ಕೊಡಗಿನ ವಿಷಯ ಸಂಪೂರ್ಣ ನುಕೆತು, ಅದಕ್ಕೆ ಮಾಡಿದ ದೊಡ್ಡ ಅಪರಾಧವನ್ನು ವೈಸರಾಯರ ಮನಸ್ಸಿಗೆ ಮುಂದಟ್ಟಗುವಂತೆ ಮಾಡುವ ಕರ್ತವ್ಯವು ಸ್ಥಳೀಕ ಸರ್ಕಾರದವದ್ದಾಗಿದೆ. ಹಿಂದೂ ದೇಶದ ಜನಸಮುದಾಯದವರು ಮುಖ್ಯವಾಗಿ ಕೃಷಿಕರ ಹಿತವನ್ನು ಸಾಧಿಸುವುದೇ ತನ್ನ ಗುರಿಯೆಂದು ಹೇಳಿರುವ ಹೊಸ ವೈಸರಾಯರು ವ್ಯವಸಾಯಗಾರರ ಪ್ರಾಂತ್ಯವಾಷ ಕೊಡಗಿನವರ ಕೂಗನ್ನು ನಿರಾಕರಿಸಲಾರರೆಂದು ಭಾವಿಸಲು ಒಹುದಲ್ಲವೇ? ಆದುದರಿಂದ ಕೊಡಗಿನ ಸುಧಾರಣೆಯನ್ನು ಕುರಿತು ಇನ್ನೂ ಆಲೋಚನೆ ಮಾಡದೆ ಇರುವುದಕ್ಕಿಂದ ಇಲ್ಲಿಯವರಿಗೆ ಉಂಟಾಗಿರುವ ಸಂಪೂರ್ಣ ನಿರಾಶೆ ಮತ್ತು ಅಗಾಧವಾದ ಅತೃಪ್ತಿ, ಮುಂದೆ ಇದರಿಂದುಂಟಾಗಬಹುದಾದ ಅನರ್ಥ ಪರಿಣಾಮ—ಇವುಗಳನ್ನು ಚೆನ್ನಾಗಿ ವಿವರಿಸಿ ವೈಸರಾಯರಿಗೆ ತಿಳಿಸುವ ಕಾರ್ಯವನ್ನು ಇನ್ನಾದರೂ ಸ್ಥಳೀಯ ಮೇಲಧಿಕಾರಿಗಳು ಕೈಕೊಳ್ಳುವರೇ? ಅವರು ಈ ಕೆಲಸಕ್ಕೆ ಕೂಡಲೆ ಕೈಹಚ್ಚಿದ್ದರೆ ಕೈ ಹಚ್ಚುವಂತೆ ಮಾಡುವ ಶಕ್ತಿಯು ಜನರಲ್ಲಿದೆಯೆಂಬುವುದನ್ನು ಉಭಯತ್ರರೂ ಅರಿತಿರಲಿ.

ಸುಬಾಷ್‌ಚಂದ್ರ ಬೋಸರ ಬಂಧನ ನಿಷೇಧದ ದಿನ.

ಕಾಂಗ್ರೆಸ್ ಪ್ರೆಸಿಡೆಂಟರ ಪ್ರಕಟಣೆ.

ಇದೇ ಮೇ ತಾ. 10 ನೇ ಆದಿತ್ಯವಾರವನ್ನು ಶ್ರೀ ಸುಬಾಷ್‌ಚಂದ್ರ ಬೋಸರ ಬಂಧನದ ನಿಷೇಧ ದಿನವನ್ನಾಗಿ ಆಚರಿಸಬೇಕೆಂದು ಕಾಂಗ್ರೆಸು ಅಧ್ಯಕ್ಷರಾದ ಶ್ರೀ ಪ. ಜವಾಹಿರ್‌ಲಾಲರು ಪ್ರಕಟಣೆ ಹೊರಡಿಸಿರುವರು.

'ಅಖಿಲ ಭಾರತದಲ್ಲೆಲ್ಲ ಒಂದು ದಿನವನ್ನು ಶ್ರೀ ಸುಬಾಷ್‌ಚಂದ್ರ ಬೋಸರ ಬಂಧನವನ್ನು ನಿಷೇಧಿಸಲು ಏರ್ಪಡಿಸಬೇಕೆಂದು ಹಲವರು ಸೂಚಿಸಿದ್ದರು ನಾನು ಅದನ್ನು ಪೂರ್ಣವಾಗಿ ಅನುಮೋದಿಸುತ್ತೇನೆ. ಆದ್ದರಿಂದ ಈ ಮೇ ತಾ. 10 ನೇ ದಿನವನ್ನು ಸುಬಾಷ್‌ಚಂದ್ರ ಬೋಸರ ಬಂಧನ ನಿಷೇಧದ ದಿನವಾಗಿ ಆಚರಿಸಬೇಕು ಆ ದಿನ ಸಾರ್ವಜನಿಕ ಸಭೆಗಳನ್ನು ಸೇರಿಸಿ ಆ ಒಗ್ಗೆ ನಿಷೇಧ ಸೂಚಕ ತರಾವುಗಳನ್ನು ಪಾಸುಮಾಡಬೇಕು.

ಶ್ರೀ. ಸುಬಾಷ್‌ಚಂದ್ರ ಬೋಸರ ಬಂಧನವು, ನಮ್ಮ ಭಾರತೀಯರ ಜನ್ಮಸಿದ್ಧ ಹಕ್ಕು ನ್ಯಾಯ್ಯ ವ್ಯಕ್ತಿ ಸ್ವಾತಂತ್ರ್ಯವು ಯಾವ ರೀತಿಯಲ್ಲಿ ಮನಸ್ಸಿಗೆ ನಿರ್ಬಂಧಿಸಲ್ಪಡುವದೆಂಬದಕ್ಕೆ ಒಂದು ಪ್ರಾಮುಖ್ಯ ನಿದರ್ಶನವಾಗಿದೆ. ಆದ್ದರಿಂದ ಅಂದಿನ ಸಭೆಗಳಲ್ಲಿ ಈ ವಿಷಯದ ಖಂಡನೆಯ ತರಾವುಗಳೂ ಪಾಸು ಮಾಡಲ್ಪಡಬೇಕು. ಅಕ್ಕೋ ಕಾಂಗ್ರೆಸು ಭಾರತೀಯರ ಜನ್ಮಸಿದ್ಧ ಹಕ್ಕುಗಳನ್ನು ಕುರಿತು ಪಾಸುಮಾಡಿದ ತರಾವುಗಳನ್ನು ಸಭೆಯಲ್ಲಿ ತಿಳಿಸಿ ಅದಕ್ಕೆ ಒಪ್ಪಿಗೆಯನ್ನು ಪಡೆಯಬೇಕು. ಈ ವಿಷಯವು ಒಂದು ಪಂಗಡ ಯಾ ಮತಕ್ಕೇನೇ ಅನ್ವಯಿಸುವದಲ್ಲ. ಯಾವ ಕೋಮಿನವನೇ ಆಗಲಿ, ಯಾವ ಸಮೂಹಕ್ಕೆ ಸೇರಿದವನೇ ಇರಲಿ, ಅತನ ಜನ್ಮಸಿದ್ಧ ಹಕ್ಕುಗಳು ಪ್ರಾಮುಖ್ಯವಾಷದ್ದು. ಆದ್ದರಿಂದ ಕಾಂಗ್ರೆಸಿನವರೇ ಮಾತ್ರವೆಂದೆನ್ನದೆ ಎಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಭಾರತೀಯರ ಜನ್ಮಸಿದ್ಧ ಹಕ್ಕುಗಳ ಭದ್ರತೆಗೆ ಪ್ರಯತ್ನಿಸಬೇಕು' ಎಂಬುದೇ ಅವರ ಪ್ರಕಟಣೆಯ ಸಾರಾಂಶ.

ಹಿಂದಿಯೇ ನಮ್ಮ ರಾಷ್ಟ್ರಭಾಷೆ.

ಗಾಂಧಿಜೀಯವರ ಭಾಷಣ.

ಅಖಿಲ ಭಾರತ ಸಾಹಿತ್ಯ ಪರಿಷತ್ತಿನ ಪ್ರಥಮ ಅಧಿವೇಶನವು ಮಹಾತ್ಮಗಾಂಧಿಯವರ ಅಧ್ಯಕ್ಷತೆಯಲ್ಲಿ ನಾಗಪುರದಲ್ಲಿ ಕಳೆದ ತಾ. 24ರಲ್ಲಿ ನಡೆಯಿತು. ರಾಷ್ಟ್ರಪತಿ ಪ. ಜವಾಹಿರ್‌ಲಾಲ್ ನೆಹರುರವರೂ, ಶ್ರೀ ಬಾಬು ರಾಜೇಂದ್ರ ಪ್ರಸಾದ್, ಶ್ರೀ. ವಲ್ಲಭಾಯಿ ಪಟೇಲ್, ಜಮನಾಲಾಲ್ ಬಜಾಜ್, ಶ್ರೀಮತಿ ಕಸ್ತೂರಿ ಬಾಯಿ ಗಾಂಧಿ ಮೊದಲಾದ ಅನೇಕ ದಿವ್ಯ ವ್ಯಕ್ತಿಗಳು ಆಗಮಿಸಿದ್ದರು ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಕಾಕ ಕಾಲೇಲಕರರು ಎಲ್ಲರನ್ನೂ ಸ್ವಾಗತೀಕರಿಸಿದರು.

ಮಹಾತ್ಮಾಜಿಯವರು ಹಿಂದಿಯೇ ನಮ್ಮ ರಾಷ್ಟ್ರಭಾಷೆಯಾಗಬೇಕೆಂದು ಉಲ್ಲೇಖಿಸಿ ಹೇಳಿದ್ದೇನೆಂದರೆ—ಶ್ರೀ ನಗರದಿಂದ ಕನ್ಯಾ ಕುಮಾರಿಯ ವರೆಗೂ, ಕರಾಚಿಯಿಂದ ದಿಬ್ರೂಗರ್ ವರೆಗೂ ಹಿಂದಿಯೇ ಹಿಂದೂಸ್ಥಾನದ ರಾಷ್ಟ್ರಭಾಷೆಯಾಗಲಿಕ್ಕರ್ಹವಾದದ್ದು. ಈಗ ಅಲ್ಲಲ್ಲಿ ಹಿಂದೀ ಉರ್ದೂ ವಾದವು ಕಂಡ ಬರುತ್ತದೆ. ಈ ಎರಡು ಭಾಷೆಗಳಿಗೆ ಪರಸ್ಪರ ವೈಷಮ್ಯಕ್ಕೆ ಕಾರಣವೇ ಇಲ್ಲ. ಇವೆರಡು ಒಂದನ್ನೊಂದು ಪರಸ್ಪರ ಅವಲಂಬಿಸಿಕೊಂಡಿರುವವಾಗಿವೆ ನಾನು ಹಿಂದಿಯೇ ರಾಷ್ಟ್ರಭಾಷೆಯಾಗತಕ್ಕದ್ದೆಂದು ಎತ್ತಿ ಹಿಡಿಯುವಾಗ ಇತರ ಭಾಷೆಗಳನ್ನು ಅಥವಾ ಇಂಗ್ಲೀಷು ಮುಂತಾದುವುಗಳನ್ನು ತೃಣೀಕರಿಸಿರುವೆನೆಂದು ಭಾವಿಸಬಾರದು. ಯತಕ್ಕೆಂದರೆ—ಇಂಗ್ಲಿಷ್ ಭಾಷೆಯು ಅಂತರಾಷ್ಟ್ರೀಯ ಮಹತ್ವದ್ದು. ಇತರ ಭಾಷೆಗಳು ಸಾಹಿತ್ಯ ದೃಷ್ಟಿಯಲ್ಲಿ ಅತೀ ಪ್ರಾಮುಖ್ಯತೆಯನ್ನು ಹೊಂದಿವೆ ಆದರೆ ಭಾರತವನ್ನು ಸಂಬಂಧಿಸಿ ಹಿಂದಿಯೇ ಎಲ್ಲಾ ಭಾಷೆಗಳಲ್ಲೂ ಅಡಗಿರುವ ಅತೀ ಶ್ರೇಷ್ಠವಾದ ಸಾಹಿತ್ಯ ಬೊಕ್ಕಸಗಳನ್ನು ಸಕಲ ಭಾರತೀಯರಲ್ಲೂ ಹರಡಲು ಅನುಕೂಲವಾದ ಒಂದು ಭಾಷೆ. ಅದು ಅತೀ ಪ್ರಾಚೀನವಾದದ್ದೂ ಮತ್ತು ಸಜ್ಜನಕ್ಕೆ ಹೆಚ್ಚು ಜನರಿಂದ ಆಡಲ್ಪಡುವದೂ ಆಗಿದೆ. ಭಾರತ ದೇಶದ ಮೂಲೆ ಮೂಲೆಗಳಲ್ಲಿರುವ ಪ್ರಜ್ಞರು ತಮ್ಮೆಳಗಿನ ಅಗಾಧವಾದ ಉಚ್ಚ ತತ್ವ ಯೂ ವಿಚಾರಗಳನ್ನು ತಮ್ಮ ಸಹೋದರರೊಡನೆ ಸಂಪರ್ಕ ಮಾಡಲು ಒಂದು ಭಾಷೆ ಅವಶ್ಯಕವಾಗಿದೆ. ಹಿಂದೂದೇಶದವರ ಒಡನಾಟಕ್ಕಾಗಿ ವಿದೇಶಿ ಭಾಷೆಯಾದ ಇಂಗ್ಲಿಷ್ ಖಂಡಿತವಾಗಿಯೂ ವರ್ಜಿಸಲ್ಪಡತಕ್ಕದ್ದು. ಹಿಂದೂದೇಶದ ಸಾಹಿತ್ಯಾಭಿವೃದ್ಧಿಗೆ ಹಿಂದೀ ಹಿಂದೂಸ್ಥಾನಿಯೇ ಅವಶ್ಯಕವಾದದ್ದು. ದೇಶದಲ್ಲಿ ಭಿನ್ನಭಿಪ್ರಾಯಗಳನ್ನು ಹರಡುವ ಒಡಕನ್ನು ಕರುವ ಸಾಹಿತ್ಯಗಳೂ ಇವೆ. ಆದರೆ ನಿಜವಾದ ಸಾಹಿತ್ಯವು ದೇಶದ ಸಾರ್ವಜನಿಕ ಹಿತದ ದೃಷ್ಟಿಯನ್ನು ಲಕ್ಷ್ಯದಲ್ಲಿಡುವದು. ಅಂಥಾ ಸಾರ್ವಜನಿಕ ಹಿತದ ದೃಷ್ಟಿಯಿಂದ ಒಂದು ಸಾರ್ವಜನಿಕ ಭಾಷೆಯು ಅವಶ್ಯಕತೆಯೂ ಇದೆ.

ವರ್ತಮಾನ ಸಂಗ್ರಹ.

ಜಿಲ್ಲೆ.

ಕಳೆದ ಏಪ್ರಿಲ್ ತಾ. 27 ರಲ್ಲಿ ಚೀಫ್ ಕಮಿಷನರವರು ಮಡಿಕೇರಿಯಿಂದ ಬೆಂಗಳೂರಿಗೆ ವಾಪಸು ಹೋದರು.

ಶ್ರೀ ವೆಂಕಟರಮಣ ಸ್ವಾಮಿ ತಿಯೇಟ್ರಿಕಲ್ ಕಂಪೆನಿಯವರು ಈಗ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ತಮ್ಮ ನಾಟಕಗಳನ್ನು ಅಭಿನಯಿಸುತ್ತಿರುವರು.

ಕಳೆದ ತಾ 26ನ್ನು ಪಾಡಿಸಬ್ಬನುಣ, ಭಕ್ತಜನ ಸಂಘದ 18ನೇ ವಾರ್ಷಿಕ ಸಾಮಾನ್ಯ ಸಭೆಯು ಮೇ ಚವ್ವುರಿರ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಳೆದ ವಾರ ಫೆಬ್ರವರಿಪೇಟೆಯಾಡು ನಲ್ಲೂರು ಗ್ರಾಮದಲ್ಲಿ ಒಬ್ಬರಿಗೆ ಪ್ಲೇಗು ಅಟಿಕೆಂದೂ, ಮಡಿಕೇರಿಯಲ್ಲಿ ಪ್ಲೇಗು ಇಲಿಗಳು ಸತ್ತವೆ ದೂ ತಿಳಿಯಬರುತ್ತದೆ.

ಸೆಂಟ್ರಲ್ ಸಹಕಾರಿ ಬ್ಯಾಂಕಿನ ಸುಪರ್‌ವಿಜನ್ ಬೋರ್ಡಿನ ವಾರ್ಷಿಕ ಸಾಲಿ ಸಿವಾಣಿ ಬೋರ್ಡಿನ ವಿಶೇಷ ಸಾಮಾನ್ಯ ಸಭೆಗಳು ಈ ತಾ 2 ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆಯಲಿವೆ.

ಉಪಾಧ್ಯಾಯರುಗಳ ಸಾಮಾನ್ಯ ಕುಂದುಕೊರತೆ ಕಳೆದ ತಾ 17 ರಿಂದ 25 ರವರೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ನಡೆಯಿತು. ಆಖೈರು ದಿವಸ 'ಪ್ರೇಕ್ಷಕರ ದಿನವೂ' ಆಚರಿಸಲ್ಪಟ್ಟಿತು.

ಕಳೆದ ವಾರ ಅತ್ತವಾದ ಪಡಿಕೇರಿ ಕಾಸೆಕ್ಟಿಪಾಲಿಟಿಯ ನಾಕಪ್ಪನ 'ಪ್ರಡ್ಡಿ' (ಇಸ್ಪೇಟು ಆ) ಟೂರ್ನಮೆಂಟಿನಲ್ಲಿ ಗೂಡಿಬೆ ಚೆಟ್ಟಪಾಳ್ಯಂ ಟೀಮಿನವರು ಗೆದ್ದು ಇನಾಮಿನ ಒಟ್ಟನ್ನು ಪಡೆದರು.

ಫೀರೆಪ್ಪ ಎಗಳಾಡ ಮೆ ಪುಟಿಯಂಡ ಮುತ್ತಪ್ಪನವರು ಪಡಿಕೇರಿಯಂದ ಚಿಕ್ಕಬಿಗೆ, ಮೆ ತೋಟಂಬೈಲು ಊದ ಸ್ಥಾನವನ್ನು ತೆರವುಗಿಯಂದ ಮಡಿಕೇರಿಗೂ ವರ್ಗಾಯಿಸಲ್ಪಟ್ಟಿರುವರೆಂದು ತಿಳಿದು ಬಂದಿದೆ.

ಕೊಡಗು ಪೊಲೀಸು ಇಲಾಖೆಯ ಇನ್‌ಸ್ಪೆಕ್ಟರ್ ಒಬ್ಬರು ಬೆಂಗಳೂರಿನಿಂದ ಪೊಳಬೆಟ್ಟಕ್ಕೆ ಬಂದಿದ್ದ ಬೆಂಗಳೂರು ಕಂಟೋನ್‌ಮೆಂಟು ಪೊಲೀಸ್ ಕಮಿಷನರಾದ ಮೆ ಆರ್. ಎಸ್. ವಿಲ್ಸನ್‌ರವರು ಕಳೆದ ತಾ 28ರಲ್ಲಿ ಮಡಿಕೇರಿಗೆ ಬಂದಿರುವರು.

ನೆಮ್ಮಲೆ ಗ್ರಾಮದ ಜೆ. ಟಿಯಂಡಡಾಡ ಗಣಪತಿಯವರ ಖೂನಿ ಕೇಸಿನ ವಿಚಾರಣೆ ಸೆಷನ್ಸ್ ಕೋರ್ಟಿನಲ್ಲಿ ಕಳೆದ ತಾ 30ಕ್ಕೆ ಮುಗಿಯಿತು. ಈ ತಾ. 4ನೇ ಸೋಮವಾರ ತೀರ್ಪು ಹೊಳ್ಳಬೆಟ್ಟದಲ್ಲಿ ಓಡ್ಡಮೊಟ್ಟು ಕೊಡಲ್ಪಡುವುದೆಂದು ತಿಳಿಯಬಂದಿದೆ.

ಮಡಿಕೇರಿ ದೇವಾಲಯದ ಜವುಡೇಶ್ವರಿ ಅಮ್ಮನವರ ಹಬ್ಬವು ಕಳೆದ ತಾರೀಕು 28ನೇ ಮಂಗಳವಾರ ಬಹು ವೈಜೃಂಭಣೆಯಿಂದ ನಡೆಯಿತು. ರಾತ್ರಿ ಸುಮಾರು 1000 ಜನರಿಂದ ಕೂಡಿದ ಮೆರವಣಿಗೆಯು ಬೀದಿಯಲ್ಲಿ ಹೋಯಿತು. ಈ ಸಾಲಿನ ಉತ್ಸವವು ಹಿಂದಿನದಕ್ಕಿಂತ ಮಿಗಿಲಾಗಿತ್ತು.

ಮಡಿಕೇರಿ ವೇದಾಂತ ಸಂಘದ ಆಶ್ರಯದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರವರ ಶತಾಬ್ದಿಯ ಸ್ಮಾರಕ ಪುಸ್ತಕದ ಪ್ರಕಾಶನ ಸಮಾರಂಭವು ಈ ತಾ. 2ನೇ ಶನಿವಾರ ಸಾಯಂಕಾಲ 5 ಗಂಟೆಗೆ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ಅಸಿಸ್ಟೆಂಟ್ ಕಮಿಷನರ್ ಮೆ. ಯಂ ಯಸ್. ಮಂಜುಣನವರ ಅಧ್ಯಕ್ಷತೆಯಲ್ಲಿ ಜರಗುವುದು. ಸರ್ವರಿಗೂ ಆಮಂತ್ರಣವಿದೆ.

ಕೊಡಗು ಹರಿಜನ ಸೇವಾ ಸಂಘಕ್ಕೆ ಧನ ಸಹಾಯಾರ್ಥವಾಗಿ ಈ ತಾ. 2ನೇ ಶನಿವಾರ ರಾತ್ರಿ 8½ ಗಂಟೆಗೆ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ 'ವಿ.ಸ' ಸಂಳಿ ಅಥವಾ ಮನೆ ಅಳಿಯ' ಎಂಬ ಉತ್ಕೃಷ್ಟವಾದ ಸಾಮಾಜಿಕ ನಾಟಕವು ಅಭಿನಯಿಸಲ್ಪಡುವುದರಿಂದ ಸರ್ವರೂ ದಯಮಾಡಿಸಿ, ಪ್ರೋತ್ಸಾಹಿಸಬೇಕಾಗಿ ಸದರಿ ಸಂಘದ ಕಾರ್ಯದರ್ಶಿಯವರ ಕೋರಿಕೆಯಾಗಿದೆ.

ಕಮಿಷನರ ಕಪ್ಪನ ಹಾಕಿ ಟೂರ್ನಮೆಂಟು ಕೊಡಗು ಎತ್ತಿಟಿಕ್ ಎಸೋಸಿಯೇಶನ ಆಶ್ರಯದಲ್ಲಿ ಕಳೆದ ತಾ. 28ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಯಿತು. ಭಾಗವಹಿಸಿದ ನಾಲ್ಕು ಟೀಮುಗಳಲ್ಲಿ ಟೌಟೋರಿಯಲ್ ಪಟಲಾಮಿನ ಟೀಮೂ ಮತ್ತು 'ಎಂಡರ್ಸ್' ಟೀಮೂ ಬೇರೆ ಟೀಮುಗಳನ್ನು ಸೋಲಿಸಿ, ಆಖೈರು ಆಟಕ್ಕೆ ನಿಂತಿರುವವು ಈ ಆಟವು ಈ ದಿನ ಸಾಯಂಕಾಲ ನಡೆಯುವುದು.

ಮಡಿಕೇರಿಯ 1926 ನೇ ಕ್ಲಬ್ಬಿನ ಆಶ್ರಯದಲ್ಲಿ ನಡೆದ ಆಖಿಲ ಭಾರತ ಟೆನ್ನಿಸ್ ಟೂರ್ನಮೆಂಟು ಕಳೆದ ತಾ. 27ರಲ್ಲಿ ಅತ್ಯವಸಾಯಿತು. ಸಂಗಲ್ಸ್‌ನಲ್ಲಿ ಬೆಂಗಳೂರಿನ ಮೆ. ತಮ್ಮಯ್ಯನವರೂ, ಡಬ್ಬಲ್ಸ್‌ನಲ್ಲಿ ಗೋಬಿಜೆಟ್ಟಪಾಳ್ಯದಿನ ಮೆ. ಕೋಟೇಶ್ವರನ್‌ರವರು ಮತ್ತು ಮೆಕಟಮಣನ್‌ರವರೂ ಮತ್ತು ಮಿಕ್ಸ್‌ಡ್ ಡಬ್ಬಲ್ಸ್‌ನಲ್ಲಿ ಮಿಸಸ್ ಮೆಕ್ಕೆ ಮತ್ತು (ಬೆಂಗಳೂರಿನ) ಡಾಕ್ಟರ್ ರಾಜನ್‌ರವರೂ ಗೆದ್ದು ಇನಾಮಿನ ಒಟ್ಟುಗಳನ್ನು ಪಡೆದರು. ಮಂಗಳೂರಿನ 13 ವರ್ಷ ಪ್ರಾಯದ ಸಲ್ಡಾನವರ ಉತ್ಕೃಷ್ಟವಾದ ಆಟಕ್ಕೆ ಅವರಿಗೊಂದು ಮೆಡಲು ಕೊಡಲಾಯಿತು. ಚೀಫ್ ಕಮಿಷನರವರ ಪತ್ನಿಯವರು ಗೆದ್ದವರಿಗೆ ಇನಾಮುಗಳನ್ನು ಹಾಜಿದರು.

ಹಿಂದೂದೇಶ.

ಬಿಹಾರ್ ಪ್ರಾಂತದ ಡುಂಕದ ಶಿವಾಲಯವು ಹರಿಜನರಿಗಾಗಿ ಸರ್ವಸಮ್ಮತದಿಂದ ತೆರೆದಿಡಲಾಗಿದೆ. ಮೊದಲು ಸವರ್ಣೀಯರಿಗೆ ಈ ಕುರಿತು ಪ್ರಬಲ ಆಕ್ಷೇಪವಿದ್ದರೂ, ಈಗ ಇದಕ್ಕೆ ಅವರೆಲ್ಲರೂ ಒಪ್ಪಿಗೆ ಕೊಟ್ಟಿರುವರು.

ಹಿಂದೂ ದೇಶದಲ್ಲಿ ಬಹಿಷ್ಕಾರವೂಡಲ್ಪಟ್ಟ ಮಿಸ್ ಮೇಯೊ ಳ ನವೀನ ಗ್ರಂಥವಾದ 'ಫೆನ್ ಆಫ್ ಮದರ್ ಇಂಡಿಯಳ' 'ಹಿಂದೂ ವತೆಯ ಮುಖ' ವೆಂಬ ಗ್ರಂಥವು ಸಮಸ್ತ ಜನಗಳಿಗೆನಲ್ಲಿ ಹರಡದಂತೆ ಬಹಿಷ್ಕಾರ ಹಾಕುವ ಏಲೇಜಸಿಗಳು ನಡೆಯುತ್ತವೆ.

ಕಲ್ಕತ್ತೆಯ ಪ್ರಾಂತದ ರಂಗಪುರ ಜಿಲ್ಲೆಯಲ್ಲಿ ಒಬ್ಬ ಬೆಸಿಜ್ಜ ಒಂಗಾಳಿ ಕರುಣನು ರೈಲ್ವೇ ಪೊಲೀಸ್ ವ್ಯಾನಿಗೆ ಸುಗ್ಗಿ, ಅಲ್ಲಿದ್ದವರಿಗೆ ಪಿಸ್ತೂಲು ತೋರಿಸಿ ಅಲ್ಲಿನ ಎಲ್ಲ ಪೊಲೀಸ್ಸರ ಚೀಲಗಳನ್ನೂ ಹಲವು ಇನಾಮ್ಕಾರ್ ಕರುರುಗಳನ್ನೂ ಲೂಟಿ ಮಾಡಿಕೊಂಡು ಪಲಾಯನ ಮಾಡಿದ್ದಾನೆ.

ಮಿ. ಗಾಂಧಿಯವರು ಮೇ ತಾ. 11ಕ್ಕೆ ಮೈಸೂರು ಸಂಸ್ಥಾನದಲ್ಲಿ ನಂದೀ ಬೆಟ್ಟಕ್ಕೆ ಬಂದು ಆ ತಿಂಗಳ ಕೊನೆಯವರೆಗೂ ವಿಶ್ರಾಂತಿ ಪಡೆಯುವವರಾಗಿದ್ದರೆಂದೂ, ಅವರೊಡನೆ ಸರ್ದಾರ್ ವಲ್ಲಭಭಾಯಿ ಪಟೇಲರ ತಮ್ಮ ಮಗಳೆಂಡನೆ ಬಹುದೆಂದೂ ಹೇಳಲಾಗಿದೆ. ಮಿ. ಗಾಂಧಿಯವರು ಜೂನ್ ತಿಂಗಳಲಿ ಎರಡರೊಡು ವಾರಗಳ ವರೆಗೆ ಬೆಂಗಳೂರಿನಲ್ಲಿಯೂ ತಂಗುವರೆಂದೂ ತಿಳಿಯುವುದು.

ಶ್ರೀ. ಸುಬಾಷ್ಚಂದ್ರ ಬೋಸ್‌ನ್ನು ಅವರ ಸಹೋದರರಾದ ಶ್ರೀ. ಶರಿಲೇಶಚಂದ್ರ ಭೋಸರು ಮುರವಾಡ ಜೈಲಿನಲ್ಲಿ ಎಡೂ ಸಲ ಕುಡು ಮಾಡತಾಡಿ ಬಂದರು. ಅವರ ಎಲೆಎಪೆನ್ಸ್ ನಿಷ್ಫಲವಾಯಿತಿಲ್ಲ; ಭೇಟಿಯು ರದ್ದಾಯಿತೂ ಸಿಧಾರವಾಗಿಲ್ಲ. ಬೋಸರಾಗೆ, 'ಟೈಮ್ಸ್ ಆಫ್ ಇಂಡಿಯ' ಪತ್ರಿಕೆಯೊಂದು ಓದಲು ಸಿಕ್ಕುತ್ತಿದೆ. ಆರೋಗ್ಯ ಪರವಾಗಿದೆ ಇವನ್ನು ಪದ್ಯ ಬರೆಗಡೆ ಮಾಡುವ ಶುಭವಿಲ್ಲ.

ಫ್ರಾನ್ಸಿಯಲ್ಲಿ, ಅಧಿಕಾರಿಗಳ ಅಪ್ಪಣೆಯಂತೆ, ಹಸಮ ಜಾತಿಗಳ ಸಂಬಂಧ ಹಿಂದೂಗಳ ದೇವಾಲಯದಲ್ಲಿ ವಾದ್ಯಭಂಡಾರಿಗಳನ್ನು ಭಾಗವಹಿಸಿದ್ದಾಗ ಕೆಲವು ಸಂದಿ ಮಸಲ್ಮಾನರು ಕಲ್ಲು ಹೊಡೆದು ಕೆಲವು ಹಿಂದೂಗಳನ್ನೂ ಒಬ್ಬ ಪೊಲೀಸ್ ಸಬ್ ಇನಸ್ಪೆಕ್ಟರನ್ನೂ ಗಾಯಗೊಳಿಸಿದರು. ಮುಂದೆ ಕ ಸಭಾಪೇಟೆಯು ಒಂದು ಮುನಿದಿಗೆ ಯಾರೋ ಕೆಲವರು ಬೆಂಕಿ ಕೊಟ್ಟು ನುಂದಿಸಿದುದಾಯಿತು. ಬಳಿಕ ಅಲ್ಲಲ್ಲಿ ಪುಂಡರು ಲೂಟಿ ನಡೆದು ಸುಮಾರು 82 ಮಂದಿಗೆ ಪೆಟ್ಟಾಗಿದೆ; ಇಬ್ಬರು ಸತ್ತರು. 150 ಮಿಶಿಟರಿಯನ್ನು ಕರೆಯಲಾಗಿದೆ. ಕರ್ಫ್ಯೂ ಆರ್ಡರ್ ಹೊಂಟಿದೆ. ಈಗ ಎಲ್ಲವೂ ಶಾಂತವಾಗಿದೆ

ವಿದೇಶ.

ಚಾಪೆಯಂತೆ ಸುತ್ತಲಿಕ್ಕೂ ಬಿಚ್ಚಲಿಕ್ಕೂ ಬರುವ ಗಾಜಿನ ನಿರ್ಮಾಣವು ವಿಜ್ಞಾನಿಗಳ ಈಚಿನ ಶೋಧನೆಯ ಫಲವೆಂದು ಪ್ರಕಟವಾಗಿದೆ.

ಸ್ವೀಡನಿನಲ್ಲಿ ಅಂಗಸಾಧನೆಯನ್ನು ವಿಶ್ವವಿದ್ಯಾಲಯವು ಸ್ಥಾಪಿಸಲ್ಪಡಲಿದೆ. ಇದೇ ಪ್ರಪಂಚದಲ್ಲಿ ಮೊದಲನೆಯ ಯುನಿವರ್ಸಿಟಿ.

ಚಕ್ರವರ್ತಿ ಸಾಮ್ರಾಟ್ ಹಿರೋಹಿತರು ಕಳೆದ ತಾ. 23ನೇ ಗುರುವಾರ ನಡೆದ ದರ್ಬಾರಿನಲ್ಲಿ ಹಾಜರಿದ್ದ ಸಾಮಂತರಾಜಯ ಸುಸ್ಥಾನದ ಮಹಾರಾಜನಿಗೆ ಕೆ. ಸಿ. ಐ. ಇ ಎಂಬ ಬಿರುದನ್ನು ಸ್ವಹಸ್ತ ದಯಪಾಲಿಸಿದರು.

ಮಹಾಯಾಗದ ತಳವಲ್ಲಿರುವ ಪವರ್‌ಹೌಸಿಗಳನ್ನು ಕಂಡುಹಿಡಿಯಲು, ಭೂಕಂಪಗಳ ಕಾರಣಗಳನ್ನು ಪರಿಶೋಧಿಸಲು ಅನೇಕ ರಿಂಕನ ನೌಕಾ ವಿಭಾಗಕ್ಕೆ ಸಂಬಂಧಿಸಿದ ಕೆಲವು ಮಂದಿ ಪಂಡಿತರು, ಸಾಗರ ಗರ್ಭದಲ್ಲಿ ಸುಮಾರು 7 ಕಾವಿಗಾ ಮೈಲಿಗಳ ಕ್ಷೇತ್ರದಲ್ಲಿ ಸುಚಾರಿಸಬೇಕೆಂದು ನಿರ್ಧರಿಸಿರುತ್ತಾರೆ.

ಫ್ರೆಂಚ್ ಸರ್ಕಾರದ ಮಹಾ ಜನಾವಣೆಯು ಬೇಗನೆ ನಡೆಯಲಿದೆ 5000 ಮಂದಿ ಉನೇದುವಾರರು ಮಂದೆ ಬಂದಿರುವರು. ಒಟ್ಟು 615 ಸದಸ್ಯತ್ವಗಳಿಗೆ ಜನಾವಣೆ ನಡೆಯಬೇಕಾಗಿದೆ. ಈ ಜನಾವಣೆಯ ದೆಸೆನಿಂದ ಎಂಪಿರ್ ವ್ಯವಹಾರಾದ ಕುರಿತು ಫ್ರೆಂಚರ ವರ್ತನೆಯು ಬಹಳವಾಗುವ ಸಂಭವಗಳಿಲ್ಲ.

ಕೆಲವು ವರ್ಷಗಳ ಹಿಂದೆ ಬಡುಕಿಸ್ತ ವ್ಯಾರಿಸ್ ನಗರವು ಭಿಕ್ಷುಕಿಯೊಬ್ಬಳ ವೃತ್ತಾಂತವಿದು. ಆಗ ಆಕೆಗೆ ವಯಸ್ಸು 75 ವರ್ಷ. 40 ವರ್ಷಗಳಿಂದಲೂ ವ್ಯಾರಿಸ್ ನಗರದ ಬೀದಿಯಲ್ಲಿ ಸರ್ವದಾ ಬೇಡಿ ತಿನ್ನುತ್ತಿದ್ದಳಂತೆ. ಕೊನೆಗೆ ಪುಶೋಧಿಯಲ್ಲಿ ಈಕೆಯ ಸುವಸ್ತವನ್ನು ಎಷ್ಟು ಬಲ್ಲಿರಾ? 20 ಸಾವಿರ ಪವನು! 30 ಮನೆಗಳ ಮೂಲಕತ್ವ! ರೈಲ್ವೆ ಷೇರುಗಳು.

ಅಬಿಸೀನಿಯಾ ದೇಶದವರ ಸಾಹಾಯ್ಯಾರ್ಥವಾಗಿ ಇಂಗ್ಲೆಂಡಿನ ಮಹಾ ಜನರು 5,00,000 ಪೌಂಡಿನ ಸಾಲವನ್ನು ಕೂಡಿಸಿತ್ತಾರೆಂದು ಪ್ರಕಟವಾಗಿದೆ. ಗ್ರೇಟ್ ಬ್ರಿಟನ್ನಿನ ಅಬಿಸೀನಿಯಾ ಕಮಿಟಿಯವರು ಈ ಏರ್ಪಾಡಿಗೆ ಮುಂದಾಳಾಗಿ ನಿಂತಿರುತ್ತಾರೆ. ಶೆ ಕಡೆ 6 ರಂತೆ ಬಡ್ಡಿ ಕೊಡುವಾಗುತ್ತದೆ. ಇತಿಯೋಪಿಯದ ಬ್ಯಾಂಕಿನ ಗವರ್ನರವರೂ ಈ ಏರ್ಪಾಡಿನಲ್ಲಿ ಸಹಕರಿಸಿರುತ್ತಾರೆ.

ಜರ್ಮನಿಯ ಸರ್ವಾಧಿಕಾರಿಯೂ ಹರ್ ಹಿಟ್ಲರಿನ ವಷ ವರ್ಧಂತಿ ಉತ್ಸವವನ್ನು ಕಳೆದ ತಾ. 20ನೇ ಸೋಮವಾರ ಬರ್ಲಿನ್ ನಗರದಲ್ಲಿ ಜನರು ಅತ್ಯಂತ ಉತ್ಸಾಹದಿಂದ ಆಚರಿಸಿದರು. 35 ಸಾವಿರ ಸೈನಿಕರು ಕವಾತು ಮಾಡಿದರು. ಅನೇಕ ಮಂದಿ ಅಧಿಕಾರಿಗಳಿಗೆ ಆ ಸಂದರ್ಭದಲ್ಲಿ ಬಹುಮಾನಗಳೂ ಬಿರುದು ಬಾವಲಿಗಳೂ ಕೊಡಲ್ಪಟ್ಟವು. ಹಿಟ್ಲರರು 1,012 ತೊಟ್ಟಿಲುಗಳನ್ನು ಬಡಪಜಗ್ಗರಿಗೂ, 34 ಸಾವಿರ ಜೊತೆ ಕಾಲು ಚೀಲಗಳನ್ನು ಸೈನ್ಯದವರಿಗೂ ಬಹುಮಾನ ಕೊಡಿಸಿದರೆಂದು ಪ್ರಕಟವಾಗಿದೆ.

ಯುದ್ಧ ವಾರ್ತೆ.

ಏಪ್ರಿಲ್ ತಾ. 23.

ಇಟೆಲಿಯವರ ಒಟ್ಟು ನಷ್ಟ.

ಅಬಿಸೀನಿಯದಲ್ಲಿ ಯುದ್ಧ ಪ್ರಾರಂಭವಾದ ನಂತರ ಈ ತಿಂಗಳ 15 ರ ವರೆಗೆ ಇಟೆಲಿಯ ಪಕ್ಷದಲ್ಲಿ 71,031 ಸೈನಿಕರು ಯುದ್ಧದಲ್ಲಾ 105 ಜನರು ಘಾಯಗಳಿಂದಲೂ ಮುತ್ತಿರುವುದೂ 53 ಮಂದಿ ಕಾಣೆಯಾಗಿರುವರೆಂದೂ ಇಟೆಲಿ ಪ್ರಾಂತದ ಪ್ರಕಟಣೆಯಿಂದ ವ್ಯಕ್ತವಾಗಿದೆ.

ಭಯಂಕರ ಕಾಳಗಗಳಾಗುತ್ತಿವೆ.

ಉತ್ತರ ಮತ್ತು ದಕ್ಷಿಣ ಎತ್ತಿಕಟ್ಟಿನ ರಣಾಂಗಣಗಳಲ್ಲಿ ಭಯಂಕರ ಕಾಳಗಗಳಾಗುತ್ತಿವೆಯೆಂದು ನಕ್ತವರ ಬಾವಿಗೆ ಇತೋಪಿಯ ಸರ್ಕಾರವು ತಿಳಿಸಿ ಅಬಾಬದಿಂದ ಬೇರೆಕಡೆಗೆ ಹೋಗುವುದಿಲ್ಲವಾಗಿ ನಿರ್ಧರಿಸಿದೆ.

ಏಪ್ರಿಲ್ ತಾ. 24

ರಾಜಧಾನಿಯು ಮೇಲೆ ಪುನಃ ವಿಮಾನ.

ಇಟೆಲಿಯ ವಿಮಾನವು ಅಬಿಸೀನಿಯದ ರಾಜಧಾನಿಯ ಮೇಲೆ ಬಹಳ ಎತ್ತರದಲ್ಲಿ ಹಾರುತ್ತಾಡುತ್ತ ನಗರವನ್ನು ಜೆಲ್ಲಾಗಿ ಪರೀಕ್ಷಿಸಿ ಹಾರಿ ಹೋಯಿತು. ನಗರದಲ್ಲಿ ಹೆಚ್ಚಿನ ಭೀತಿಯುಂಟಾಗಲಿಲ್ಲ.

ದಕ್ಷಿಣಾರ್ಧಾಗಿ ಇಟೆಲಿಯ ಸರ್ವ ಆಕ್ರಮಣ

ದಕ್ಷಿಣಾರ್ಧಾಗಿ ಇಟೆಲಿಯ ಸರ್ವ ಪ್ರಾರಂಭವಾಗುವ ಧಾಳಿಯು ಜಯಪ್ರದವಾಗಿದೆಯೆಂದು ಹೇಳಲಾಗಿದೆ ದಕ್ಷಿಣಾರ್ಧಾಗಿ ಡಗ್ಲಾಬರ್ ಪತ್ರ ಶಸನೆನ್ನೆ ಎಂಬೊಡು ಪತ್ರಗಳನ್ನು ಹೊತ್ತು ಯುವ ಮಹಪ್ಪಾಯತ್ನದಲ್ಲಿರುವನು.

ಏಪ್ರಿಲ್ ತಾ 26

ಶರಣಪೆನ್ನೆಯು ಕೈವಶವಾಯಿತು.

ದಕ್ಷಿಣದಲ್ಲಿ ಶರಣಪೆನ್ನೆಯನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಮುಂದುವರಿಯುತ್ತಲಿದ್ದ ಇಟೆಲಿಯ ಸೈನಿಕರು ಅದನ್ನು ಆಕ್ರಮಿಸಿರುವರೆಂದು ತಿಳಿಯಬಂದಿದೆ. ಇದನ್ನು ಕೈವಶಪಡಿಸಿಕೊಂಡ ಅಬಿಸೀನಿಯರು ಅತುಲ ಪರಾಕ್ರಮದಿಂದ ಹೋರಾಡಿದರು. ಮೇಲಿಂದ ವಿಮಾನಗಳ ಧಾಳಿಯನ್ನು ನೆಲದಿಂದ ಫಿರಂಗಿ ಏಟುಗಳನ್ನು ತಡೆಯಲಾರದೆ ಹಿಮ್ಮೆಟ್ಟಿದರಂತೆ. ಈ ಕಾಳಗದಲ್ಲಿ ಸುಮಾರು 40 ವಿಮಾನಗಳು 16 ಟ್ಯಾಂಕುಗಳನ್ನು ಎಸೆದವು. ದಕ್ಷಿಣದಲ್ಲಿ ಈ ವರೆಗೆ ಇಷ್ಟು ಭೀಕರ ಕಾಳಗವಾಗಿರಲಿಲ್ಲ

ಡಗಾಬೋಡೋ ಪಟ್ಟಣವೂ ಇಟೆಲಿಯರ ಕೈವಶವಾಯಿತು.

ದಕ್ಷಿಣದಲ್ಲಿನ ಡಗಾಬೋಡೋವು ಸಹ ಇಟೆಲಿಯರ ಕೈವಶವಾಯಿತು. ಅಬಿಸೀನಿಯರು ಅವನ್ನು ಮುರಳಿ ಹೋಗಲು ಎಡರು ದಿನಗಳ ವರೆಗೆ ಎತ್ತಿಡಿದರೆ ಹೇಳಲಾಗಿದೆ. ಕಡೆಗೆ ಹಿಮ್ಮೆಟ್ಟಬೇಕಾಯಿತು. ಈ ಕಾಳಗದಲ್ಲಿ ಇಟೆಲಿಯ ಪಕ್ಷದಲ್ಲಿ 700 ಮಂದಿ ಸೈನಿಕರೂ ಅಬಿಸೀನಿಯರ ಪಕ್ಷದಲ್ಲಿ 1000 ಮಂದಿ ಸೈನಿಕರೂ ಹತರಾದರೆಂದು ತಿಳಿಯಬಂದಿದೆ.

ಏಪ್ರಿಲ್ ತಾ. 27.

ಇಟೆಲಿ ವಿಮಾನಗಳನ್ನು ಧ್ವಂಸಗೊಳಿಸಿದರು

ಶರಣಪೆನ್ನೆಯು ಬಳಿ ಅಬಿಸೀನಿಯರು ನಾಲ್ಕು ಇಟೆಲಿ ವಿಮಾನಗಳನ್ನು ಗುಂಡು ಹೊಡೆದುರುಳಿಸಿರುವರು, ಅಲ್ಲದೆ ಎಡು ಟ್ಯಾಂಕುಗಳನ್ನು ಕೆಡಹಿರುವರು.

ಅತೀವ ಅಬಾಬದಲ್ಲಿ ಇಟೆಲಿಯ ಜಾಹೀರುನಾವೆ.

ರಾಜಧಾನಿಯ ಮೇಲೆ ವಿಮಾನದ ಮೂಲಕ ಸೇನಾನಾಯಕ ಮೂಸೊಲಿನಿ ಬೆಂಡೆತ್ತಿದ್ದಾಗಿ ಹೇಳಲಾಗಿದೆ ಜಾಹೀರುನಾವೆಯನ್ನು ಹತ್ತಿಪತ್ತಗಳ ಮೂಲಕ ಅತ್ಯಾಧಿಕ್ ಬಾಷೆಯಲ್ಲಿ) ಜಲ್ಲಿರುವರು. ಅದಲ್ಲಿ ಈ ಸ್ವರಕಾ ಬರೆದಿದೆ.

'ಶೋಧವ ಪ್ರಾಂತದ ನಿವಾಸಿಗಳೇ ಕೇಳಿ, ನಾನು ಜಯಪ್ರದವಾದ ಸೈನ್ಯದೊಡನೆ ನಿಮ್ಮ ಪ್ರಾಂತ್ಯಕ್ಕೆ ಕಾಲಿಟ್ಟಿರುವೆನೆ, ಮತ್ತು ನಿಮ್ಮ ರಾಜಧಾನಿಯನ್ನು ಹತಮುಖ ಇಟ್ಟಿರುವೆನು. ನನ್ನ ಸೈನ್ಯವನ್ನೆದುರಿಸುವ ಸೈನ್ಯಗಳನ್ನು ಮತ್ತು ಚಕ್ರವರ್ತಿಯ ಸೈನ್ಯಗಳನ್ನು ನಮ್ಮ ಸೈನ್ಯವು ಧ್ವಂಸಮಾಡಿದೆ. ಈಗಾಗಲೇ ಗೊಂಡರ್, ಸಕೋಟ ಮತ್ತು ಡೆಸ್ಸಿನ ಗುಗಳನ್ನು ನಾನು ಹತಿದಿರುವೆನು. ದಕ್ಷಿಣದ ಹಾರಾಟವನ್ನು ನಮ್ಮ ಸೈನ್ಯವು ಬೇಗನೇ ಆಕ್ರಮಿಸುವುದು.

'ನಮ್ಮ ನಾಲ್ಕನು ವಿಮಾನಗಳು, ನಿಮಗೆ ಶಾಂತಿಯ ಸುದೇಶಗಳನ್ನು ಹೊತ್ತಿರುವವು. ಶೋಧವ ಪ್ರಾಂತ್ಯವನ್ನೇ ಕೈಸ್ಥ ರಕ್ಷವು ಇನ್ನೇತಕ್ಕೆ ಹೆಚ್ಚಿಗೆ ಸುರಿಸಲ್ಪಡಬೇಕು? ನಾನು ನಿಮಗೆ ಶಾಂತಿ, ಮತ್ತು ನಾಗರೀಕತೆಯನ್ನು ತರುತ್ತಿರುವೆನು. ಸೈನ್ಯಕ್ಕೆ ಸೇರಿಸಲ್ಪಟ್ಟವರೆಲ್ಲರೂ ತಮ್ಮ ತಮ್ಮ ಗ್ರಾಮಗಳಿಗೆ ಮರಳಿರುಗಿ ಅಲ್ಲಿ ಕೃಷಿಯನ್ನು ಪ್ರಾರಂಭಿಸಿ, ನಿಮ್ಮ ವ್ಯಾಪಾರವನ್ನು ಬೆಳೆಸಿ, ನನ್ನ ಸೈನ್ಯವನ್ನು ಎದುರಿಸಬೇಡಿ. ನಾನು ಮಾಡಿದ ನಿಯಮಗಳನ್ನು ಕೈಗೊಳ್ಳಬೇಕು. ನಿಮ್ಮ ಚರ್ಚು, ನಿಮ್ಮ ಆಸ್ತಿ ಮತ್ತು ನಿಮ್ಮ ಪ್ರಾಣಗಳಿಗೆ ಹಾನಿಯಾಗುವುದಿಲ್ಲ.

ನೀವು ಎಲ್ಲಿದ್ದರೂ ನನ್ನ ಸೈನ್ಯವನ್ನೆದುರಿಸಿದರೆ ನಮ್ಮ ರಸೈಗಳನ್ನು ಹಾಳುಮಾಡಿದಲ್ಲವೆ, ಇಟೆಲಿಯ ಕೋಪವು ನಿಮ್ಮ ಮೇಲೆ ತೀವ್ರವಾಗಿ ಬೀಳುವುದು. ನನ್ನ ವಿಮಾನಗಳು ನಿಮ್ಮ ಮೇಲೆ ವೃತ್ಯುವನ್ನೇ ಎಸೆಯುವುದು.

ಎಚ್ಚರಿಕೆಯಿಂದ ಪರಿಣಾಮ.

ಅಬಿಸೀನಿಯ ಸೈನಿಕರು ಒಬ್ಬೊಬ್ಬರಾಗಿ ತಮ್ಮ ತಮ್ಮ ಸ್ವಗ್ರಾಮಕ್ಕೆ ತೆರಳುತ್ತಿರುವರು. ಅವರೆಲ್ಲರ ಪಾದಗಳು

ವಿಷ ಬಾಂಬುಗಳ ವಿಷವು ನೆಲದಲ್ಲಿ ಹರಡಿಕೊಂಡಿರುವುದರಿಂದ ಬೆಂದುಹೋಗಿವೆ. ಅನೇಕ ದೇಹಾವಯವಗಳು ಬೆಂದು ಕೆಲವರ ಮುಖಭಾವಗಳೇ ವಿಲಕ್ಷಣವಾಗಿದೆ. ಅವರಿಗೆ ಇನ್ನು ಯುದ್ಧ ಮಾಡಲು ಸಾಧ್ಯವಿಲ್ಲವೆಂದೂ ಇಟೆಲಿಯವರೊಡನೆ ಎಡುತು ಎದುರು ಯುದ್ಧ ಮಾಡುವರಾದರಾದರೂ ವಿವಾನ ಧಾಳಿಯನ್ನು ಸೈರಿಸಲಾರರೆಂದೂ ಹೇಳುತ್ತಿರುವರು. ಇಟೆಲಿಯು ವಿವಾನಗಳ ಧಾಳಿಯೂ ವಿಷಬಾಂಬುಗಳಿಗೂ ಅಬಿಸೀನಿಯರನ್ನು ಬಹಳ ಮಟ್ಟಿಗೆ ಹುಸಿಸುತ್ತಿದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ.

ಹೊಸ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ವಾರ್ಧಾದಲ್ಲಿ ತಾ. 28ರಲ್ಲಿ ಪ. ಜವಾಹಿರ್‌ಲಾಲರ ಅಧ್ಯಕ್ಷತೆಯಲ್ಲಿ ಕೂಡಿತು. ಮೊದಲನೇ ದಿವಸದ ಚರ್ಚೆಯಲ್ಲಿ (1) ವಿದೇಶ ಪ್ರಚಾರದ ಒಂದು ಶಾಖೆಯನ್ನೇರ್ಪಡಿಸುವ ಮತ್ತು (2) ವರ್ತಮಾನ ಚರ್ಚೆಯನ್ನು ಸ್ಥಾಪಿಸುವ ಎರಡು ವಿಷಯಗಳನ್ನು ಕುರಿತು ತರಾವುಗಳು ಪಾಸಾದವು. ಆದರೆ ಗಾಂಧಿ ಮಾಂತರಗಳಲ್ಲಿನೆ ಕಾಂಗ್ರೆಸ್ ಕಾರ್ಯಕ್ರಮವನ್ನು ಕುರಿತು ಈ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ಎರಡು ಮತಗಳಾಗಿ ಅನೆರಡರಲ್ಲಿ ಒಡಂಬಡಿಕೆಯೊಗಲೇ ಇಲ್ಲ. ಪ. ಜವಾಹಿರ್‌ಲಾಲರು, ಆಚಾರ್ಯ ನರೇಂದ್ರದೇವ್, ಜಯಪ್ರಕಾಶ ನಾರಾಯಣ ಮತ್ತು ಅಚ್ಯುತ್ ಪಟ್ವರ್ಧನ್ ಇವರು ಒಂದು ಮತದ ವರಾಗಿಯೂ, ಸರ್ದಾರ್ ಪಟೇಲ್, ಬಾಬು ರಾಜೇಂದ್ರ ಪ್ರಸಾದ್, ಭುಲಭಾಯಿ ದೇಸಾಯಿ ಮತ್ತು ರಾಜಗೋಪಾಲಾಚಾರ್ಯರು ಮತ್ತೊಂದು ಮತದವರಾಗಿಯೂ ಉಳಿದವರೆಲ್ಲ ಈ ಎರಡನೇ ಪಕ್ಷದ ಮತದವರ ಕಡೆಗೇನೇ ಅನುಮೋದಿಸುವವರಾಗಿಯೂ ವಿಂಗಡವಾಗಿದ್ದು ಬಹಳ ಸಮಯದ ಪರಿಗೂ ಚರ್ಚೆ ನಡೆದು ಯಾವ ತೀರ್ಮಾನಕ್ಕೂ ಬಂದಿಲ್ಲವೆಂದು ಹೇಳಲಾಗಿದೆ. ಅನಂತರ ಮಹಾತ್ಮ ಗಾಂಧಿಜಿಯವರು ಬಂದು ಎರಡು ತಾಸುಗಳ ಕಾಲ ಇತ್ತಂಡದವರ ಅಭಿಪ್ರಾಯಗಳನ್ನು ಕೇಳಿ ಇತ್ತಂಡದವರಿಗೆ ಸಮಂಜಸವಾದ ತೀರ್ಮಾನವನ್ನು ಕೊಟ್ಟಿರುವರಾಗಿ ತಿಳಿಯಬಂದಿದೆ. ಮಹಾತ್ಮಾಜಿಯವರು ಕಾಂಗ್ರೆಸ್ಸಿನಿಂದ ನಿವೃತ್ತಿ ಹೊಂದಿದನಂತರ ಇದೇ ಪ್ರಥಮ ಸಲ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಹೀಗಿ ಭಾಗ ವಹಿಸಿದ್ದು. ಈ ವರೆಗೆ ಕಮಿಟಿ ಸಭೆಗಳಾಗುತ್ತಿದ್ದಾಗ ಕೆಲವರು ವಿಶಾಖಪಟ್ಟಣಕ್ಕೆ ಹೋಗಿ ಅವರ ಅಭಿಪ್ರಾಯವನ್ನು ಸೂಚಿಸಿ ಬರುತ್ತಿದ್ದರು.

ಎರಡನೇ ದಿವಸದ ಚರ್ಚೆಯಲ್ಲಿ ಕಾಂಗ್ರೆಸ್ ಸಾಲಿನ ಮೊಟ್ಟ ಮೊದಲಿನ ರಚನೆಯನ್ನು ಪರಿಶೀಲಿಸಲಾಯಿತು. ಇದಕ್ಕೆ ಶ್ರೀಯುತರುಗಳಾದ ಬಾಬು ರಾಜೇಂದ್ರ ಪ್ರಸಾದ್, ಸರ್ದಾರ್ ಪಟೇಲ್, ಸಿ. ರಾಜಗೋಪಾಲಾಚಾರಿ, ನರೇಂದ್ರದೇವ್, ಭುಲಭಾಯಿ ದೇಸಾಯಿ, ಜವಾಹರ್‌ಲಾಲ್ ನೆಹರು, ಪಂಡಿತ ಗೋವಿಂದವಲ್ಲಭ ಪಂತ್ (ಯುನೈಟೆಡ್ ಪ್ರಾವಿನ್ಸ್) ಮತ್ತು ಎಲ್ಲ ಪ್ರಾಂತೀಯ ಕಮಿಟಿಗಳ ಅಧ್ಯಕ್ಷರೂ ಸೇರಿರುತ್ತಾರೆಂಬುದಾಗಿಯೂ ಅಲ್ಲದೆ ಶ್ರೀಯುತರುಗಳಾದ ಆಚಾರ್ಯ ಕೃಪಲಾನಿ, ಜಯರಾಮದಾಸ್ ದೌಲತ್‌ರಾಂ, ಶಂಕರ್‌ಲಾಲ್ ಬ್ಯಾಂಕರ್, ಯಂ ಆರ್ ಮಸಾನಿ ಮತ್ತು ಎ ವಿ. ಗಿರಿ ಇವರುಗಳಿದ ಕೂಡಿದ ಒಂದು ಕೂಲಿಗಾರರ ಸಮಿತಿಯೂ ಸೇವಾಕವಾಯಿತು.

ಕಾಂಗ್ರೆಸ್ ಘಟನೆಯಲ್ಲಿ ಒಂದೆರಡು ತಿದ್ದುಪಡಿಗಳೂ ಪಾಸಾಯಿತು. ವಿಚಾರವು ಇನ್ನೂ ನಡೆಯುತ್ತಲೇ ಇದೆ.

ಪ್ರಕಟಣೆ.

ಮೂದಾಪುರ ಜಂಬೂರು ತೋಟದಲ್ಲಿರುವ ಪರಮಶ ಸಬ್ಬೋದರ್ ಡಿಸೋಜರ ಮಗಳು ಮರಿಯ ಮಗ್ದಲೀನಳು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ:—

ನನ್ನ ತಂದೆ ಸಬ್ಬೋದರ್ ಡಿಸೋಜರು ಜೀವಂತರಾಗಿರುವಾಗ್ಯೆ ಮಡಿಕೇರಿ ವೀರರಾಜಪೇಟೆ ರಸ್ತೆ 1 ನೇ ಮೈಲು 1 ನೇ ಫರ್ಲಾಂಗ್‌ನಲ್ಲಿ ಸಂಪಾದಿಸಿದ ಸ್ಥಿರ, ಚರ ಸೊತ್ತುಗಳನ್ನು ನನಗೂ, ನನ್ನ ತಂಗಿಗೂ ತಿಳಿಯದೆ ನನ್ನ ತಮ್ಮಂದಿಯರೂ, ತಾಯಿಯೂ ಸೇರಿ ಪಾಲು ಪಂಕ್ತಿ, ವೂಡಿ ಆಸ್ತಿಯನ್ನು ಪರಾಧೀನ ಮಾಡುವರೆಂಬ ಸಂಗತಿ ತಿಳಿದುಬರುತ್ತದೆ. ಆದ ಕಾರಣ ನಾವುಗಳು ನನ್ನ ತಾದೆಗೆ ಹುಟ್ಟಿದ ಹಿರೇ ಮಕ್ಕಳು. ಪಾಲುವಂತಿಗೆಗೆ ನಾವು ಸರಿಯಾದ ಹಕ್ಕುದಾರರಾಗಿರುವ ಕಾರಣ ಸದರಿ ಸ್ಥಿರ ಚರ ಆಸ್ತಿಯನ್ನ ಪರಾಧೀನ ಮಾಡುವು ದಾಗಲೀ ಯಾ ಪಾಲು ಮಾಡುವುದಾಗಲೀ ನನ್ನ ಅನುಮತಿ ಇಲ್ಲದೆ ಅವರಿಗೆ ಅಧಿಕಾರವಿಲ್ಲವೆಂಬ ಸಂಗತಿ ಈ ಮೂಲಕ ತಿಳಿಸಲಾಗಿದೆ.

ತಾ. 1—5—36. **ಮರಿಯ ಮಗ್ದಲೀನ.**

ಪೊನ್ನಂಪೇಟೆ—ಶ್ರೀಮಂಗಲನಾಡುಗಳ ಜಮ್ಮ ಓಟರುಗಳಲ್ಲಿ ಪಿ. ಜಿ. ಮುದ್ದಮ್ಮಯ್ಯನ ವಿಜ್ಞಾಪನೆ.

ಈಗ ತಾನೇ ನಮ್ಮ ಕೌನ್ಸಿಲ್‌ನಲ್ಲಿ ಖಾಲಿ ಬಿದ್ದಿರುವ ಒಂದು ಸ್ಥಳಕ್ಕೆ ನಮ್ಮ ತಾಲೋಕಿನ ಪರವಾಗಿ ನಾನೊಬ್ಬ ಉಮೇದ್ವಾರನಾಗಿರುತ್ತೇನೆ. ಸದರಿ ಸ್ಥಳಕ್ಕೆ ತಾವುಗಳೆಲ್ಲರು ತಾರೀಕು 15—5—36 ನೇ ಶುಕ್ರವಾರ ದಿನ ನಿಮ್ಮ ನಿಮ್ಮ ಪೋಲಿಂಗ್ ಸ್ಟೇಶನಿಗೆ ದಯವಾಡಿಸಿ ಒಮ್ಮನಸ್ಸಿನಿಂದ ತಮ್ಮ ದೊಂದು ಓಟನ್ನು ನನಗೆ ಕೊಟ್ಟು ನನ್ನನ್ನು ಜಯಶೀಲನಾಗಿ ಮಾಡಿ ತಮ್ಮೆಲ್ಲರ ಸೇವೆ ಮಾಡಲು ಅನುಕೂಲಪಡಿಸಿಕೊಡ ಬೇಕಾಗಿ ವಿನಯಪೂರ್ವಕವಾಗಿ ಬೇಡುತ್ತೇನೆ.

ಪೊನ್ನಂಪೇಟೆ, 4—4—36. ಇಂತಿ ತಮ್ಮ ಸೇವಕ, **ಪಿ. ಜಿ. ಮುದ್ದಮ್ಮಯ್ಯ.**

ಡಾಕ್ಟರ್ ಮೇತ್ಯುಸ್ ಎಬ್ರಹಾಮ್.

ದಂತ ವೈದ್ಯರು.

ಗೀತಾಂಜಲಿ ಬಂಗ್ಲೆ.

(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು. [52—1]



"501 ಸೋಪಿನ ಸಾಬೂನನ್ನು ಉಪಯೋಗಿಸತೊಡಗಿದಂದಿನಿಂದ ಬಟ್ಟೆ ಒಗೆಯುವ ದಿನಗಳು ಅನಾಯಾಸವಾಗಿವೆ."

ವೆಚ್ಚ ಕಡಿಮೆ. ವಸ್ತ್ರ ಬಾಳಿಕೆ. ಶ್ರಮ ಅತೀ ಕಡಮೆ!

ಟಾಮ್‌ಕೋ ಮೂರಾಟದ ಮಳಿಗೆ, TMC ೧, ಸೌಟ್ಸ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ತಯಾರಿಸುವವರು—ತಾತಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ತಾತಾಪುರ.

52—48. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಶ್ರಮವಾದ ಅಭಿವೃದ್ಧಿಯಿಂದ ಭಾರತ ವಿಮೋರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ಮಂಗಳೂರಿನ

ದಿ ಪೊಪ್ಯುಲರ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯ, ನಿಮ್ಮ ಒಲುಮೆಯ ಈ ಸಂಸ್ಥೆಯಲಿ ತಪ್ಪದೆ ವಿಮೆಯನ್ನಿಳಿಸಿ.

ಮೊದಲನೇ 5 ವರ್ಷಗಳ ಮೌಲ್ಯಶೋಧನೆಯ ಫಲಿತಾಂಶವಾಗಿ ಪ್ರತಿಯೊಂದು 1000 ರೂಪಾಯಿಗಳ ವಿಮೋಪತ್ರದ ಮೇಳೆ,—

ವರ್ಷ 1ಕ್ಕೆ ರೂಪಾಯಿ 10ಕ್ಕೆ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯವೇತನದಲ್ಲಿ ಇಷ್ಟು ಬೋನಸನ್ನು ಹಾಚಿದ ಹಿಂದೀ ವಿಮೋಕ್ತಪೆನಿಗಳು ಅತಿ ವಿರಳವೆಂಬುದನ್ನು ಮರೆಯದಿರಿ.)

ನಮ್ಮ ಪ್ರತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಮಾಹಿತಿಪತ್ರ, ವಿವರಣೆಯು ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು—
ಬಿ. ಜಿ. ಬೆಳ್ಯಪ್ಪನವರು,
ವಸ್ತ್ರಗಳ ವ್ಯಾಪಾರಿ, ಮಡಿಕೇರಿ. (52—10)

ಸುಂಟಿಕೊಪ್ಪ ಏಜಂಟರು—
ಏ. ಎಸ್. ಮೂಚಯ್ಯನವರು.
ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

ಕೊಡಗು ವೀರಶೈವ ವಿದ್ಯಾನಿಧಿ ಸಂಘದ ಆರನೆ ಮಹಾಸಭೆ.

ಮೇಲ್ಕಂಡ ಸಂಘದ ಆರನೆ ಅಧಿವೇಶನವು ತಾ 12-4-36 ನೇ ಭಾನುವಾರ ಹಗಲು 12 ಗಂಟೆಗೆ ಶ್ರೀಜಗದ್ಗುರು ಜಯದೇವಬಾಣೆಯಲ್ಲು ದಿವಾನ್ ಬಹದ್ದೂರ್ ಕೆ.ಟಿ.ಪೀಳಿ ಚಂಗಪ್ಪನವರ ಅಧ್ಯಕ್ಷತೆಯಲ್ಲು ನಡೆಸಲಾಯಿತು. 23 ಜನ ಪ್ರತಿನಿಧಿಗಳೂ ಹಲವು ಜನ ಪ್ರೇಕ್ಷಕರೂ ಸಭೆದೆ ದಯಮಾಡಿಸಿದ್ದರು.

ಸಭಾ ಕಾರ್ಯವನ್ನು ಪ್ರಾರಂಭಿಸುವ ಮೊದಲು ಜಾರ್ಜ್ ಸಾರ್ವಭೌಮರ ನಿಧನದ ಮತ್ತು ಎಡ್ವರ್ಡ್ ಪ್ರಭುಗಳ ಪಟ್ಟಕ್ಕೆ ನಮ್ಮ ರಾಜಭಕ್ತಿ ಪ್ರದರ್ಶನದ ಸಂಬಂಧವಾದ ಎರಡು ನಿರ್ಣಯಗಳನ್ನು ಗೌರವ ಸೆಕ್ರೆಟರಿಯೂದ ಹೆಚ್. ಎನ್. ಪೂವಪ್ಪಣ್ಣನವರು ಸಭೆಯ ಮುಂದೆ ಈ ಪ್ರಕಾರ ಸೂಚಿಸಿದರು.

(1) 'ನಮ್ಮೊನ್ನಾಳುತ್ತಿದ್ದ ಸಾರ್ವಭೌಮ ಐದನೆ ಜಾರ್ಜರು ದಿವಂಗತರಾದುದಕ್ಕೆ ಅವರ ಆತ್ಮಕ್ಕೆ ಶಾಂತಿಯನ್ನೀಯಲೆಂದೂ ಅವರ ಕುಟುಂಬಕ್ಕೆ ಚಿರಾಯುರಾರೋಗ್ಯ ಐಶ್ವರ್ಯ ಯೂದಿಗಳನ್ನಿತ್ತು ಕಾಪಾಡಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇವೆ.

(2) 'ಹಾಲಿನಮ್ಮೊನ್ನಾಳುತ್ತಿರುವ ಸಾರ್ವಭೌಮ ಎಂಟನೆ ಎಡ್ವರ್ಡ್ ಪ್ರಭುಗಳವರಿಗೆ ನಾವು ನಮ್ಮ ರಾಜಭಕ್ತಿಯನ್ನು ಸೂಚಿಸುವುದಲ್ಲದೆ ಅವರೂ ಅವರ ಕುಟುಂಬವೂ ಚಿರಕಾಲ ರಾಜ್ಯಭಾರದ ಸುಖಸಂತಸವನ್ನು ಅನುಭವಿಸಲೆಂದು ಭಗವಂತನು ಕರುಣಿಸಲೆಂದೂ ಪ್ರಾರ್ಥಿಸಿ ನಾವು ಅವರಿಗೆ ನಮ್ಮ ರಾಜಭಕ್ತಿ ಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸುವವರಾಗಿರುತ್ತೇವೆ.' ನಂತರ ಸರ್ವರೂ ಎದ್ದು ನಿಂತು ಏಕಾಭಿಪ್ರಾಯದಿಂದ ಈ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು

(3) ನಮ್ಮ ಸಂಘದ ಪಾಲಕರಲ್ಲಿ ಒಬ್ಬರಾದ ಈರೆಹಳ್ಳಿ ಪೂಜಿ ಶ್ಯಾನುಭೋಗ್ ಮೆ. ವೀರಪ್ಪನವರು ದಿವಂಗತರಾದ ಪ್ರಯುಕ್ತ ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದೂ ಇವರ ಕುಟುಂಬಕ್ಕೆ ಚಿರಾಯುರಾರೋಗ್ಯ ಐಶ್ವರ್ಯಾಭಿವೃದ್ಧಿಗಳನ್ನಿತ್ತು ಕಾಪಾಡಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ, ಎಂಬ ತೀರ್ಮಾನವು ಸರ್ವಾನುಮತದಿಂದ ಪಾಸಾಯಿತು.

ಅನಂತರ ಸಂಘದ ಗೌರವ ಸೆಕ್ರಟೆರಿಯವರು ತಯಾರಿಸಿದ ಸಂಘದ ಆರ್ಥಿಕ ವರದಿಯನ್ನು ಓದಿ ಹೇಳಿ ಮಂಜೂರು ಮಾಡಲಾಯಿತು.

ಶ್ರೀ. ಹೆಚ್. ಜಿ. ಕಾಳೇಗೌಡ್ರಲ್ಲಿರುವ ಪೊಟಲಗಿಗೆ ಮೆ. ಬಿ. ಜಿ. ಒಸ್ವೇಗೌಡ್ರನ್ನು ಸೇರಿಸಿ, ಜಾಮೀನು ಕರಾರು ಮಾಡಿಕೊಡುವಂತೆಯೂ, ಇವರಲ್ಲಿರುವ ವೆಚಲಗಿಗೆ ಮೂರು ಕಂತು ಕೊಡುವಂತೆಯೂ. ಕಂತು ತಪ್ಪಿದ ಕೂಡ್ಲೆ ಎಲ್ಲಾ ಪೊಟಲಗನ್ನು ವಾಪಾಸು ಮಾಡಿಸುವಂತೆ, ಸರ್ವಸಮ್ಮತದಿಂದ ತೀರ್ಮಾನಿಸಲಾಯಿತು.

ಇನ್ನು ಮುಂದೆ ಈ ಸಂಘದ ಮುಖ್ಯ ಕಛೇರಿಯನ್ನು ಮಡಿಕೇರಿಯಲ್ಲಿ ತೆರೆಯುವಂತೆ ಸರ್ವಸಮ್ಮತದಿಂದ ತೀರ್ಮಾನಿಸಲಾಯಿತು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ವ್ಯಾಸಂಗವಾಡುವ ವೀರಶೈವ ವಿದ್ಯಾರ್ಥಿಗಳ ಸಲುವಾಗಿ ಒಂದು ಹಾಸ್ಟೆಲನ್ನು ತೆರೆಯಲು ಬೇಕಾದ ವಸತಿಗಳನ್ನು ಘನಸಂಕಾರದವರಲ್ಲಿ ಕೇಳಲು ಮುಂದಿನ ಕಾರ್ಯಕಾರಿ ಮಂಡಳಿಗೆ ಬಿಡಲಾಯಿತು.

ಈ ಕೆಳಗಿನ ಮಹನೀಯರುಗಳನ್ನು ಇನ್ನು ಎರಡು ವರ್ಷಗಳ ವರೆಗೆ ಕಾರ್ಯಕಾರಿ ಮಂಡಳಿಯವರನ್ನಾಗಿ ಆರಿಸಲಾಯಿತು.

1. ಮೆ. ಎಸ್. ಒಸಪ್ಪನವರು, ಪ್ಲೀಡರ್ಸ್ ಅಂಡ್ ಕಮಿಷನರ್ಸ್, ಮಡಿಕೇರಿ
2. ,, ಹೆಚ್. ಡಿ. ಚನ್ನಮಲ್ಲಪ್ಪನವರು, ವೈಸ್ ಪ್ರೆಸಿಡೆಂಟರು, ಹಂಡ್ಲಿಗ್ರಾಮ
3. ,, ಕೆ. ಮಲ್ಲಪ್ಪನವರು, ವಕೀಲರು, ಗೌರವ ಸೆಕ್ರೆಟರಿ ಮಡಿಕೇರಿ

ಕಮಿಟಿ ಮೆಂಬರುಗಳು

4. ,, ಎಸ್. ಒಸಪ್ಪನವರು — ಪಸ್ಯ,
5. ,, ಬಿ. ಬಿ. ಒಸಪ್ಪನವರು — ಬೇಳೂರು
6. ,, ಎ ಎಸ್. ಕಂಒಸಪ್ಪನವರು — ಕೊಡ್ಲಿಪೇಟೆ
7. ,, ಕೆ. ಎಸ್. ಕರಿಒಸಪ್ಪನವರು — ,,
8. ,, ಎಲೆ ಶುಕರಪ್ಪನವರು — ,,
9. ,, ಬಿ. ಜೆ. ಒಸವಣ್ಣೈಯ್ಯನವರು — ಬೆಳ್ಳಾರಳ್ಳಿ,
10. ,, ಜಂ. ಕರಒಸವಯ್ಯ ಯಾನೆ ಸಂಗೈಯ್ಯನವರು — ಗುಡುಗಳಲಿ,
11. ,, ಗುರುವಾದ ಸ್ವಾಮಿಗಳು — ಮೂದಾವುರ,
12. ,, ಯೇಜಂಟ್ ಮಲ್ಲಪ್ಪನವರು — ಬೇಳೂರು,
13. ,, ಬಿ ದೇವಯ್ಯನವರು — ತೋರನೂರು
14. ,, ಯಂ. ಶಿದ್ದಲಿಂಗಪ್ಪನವರು — ಮಡಿಕೇರಿ,
15. ,, ಗುಬ್ಬಿ ಬಸಪ್ಪನವರು — ,,
16. ,, ಎಸ್. ಯಂ. ಚನ್ನಬಸಪ್ಪನವರು — ಶನಿವಾರಸಂತೆ.

ಅಧ್ಯಕ್ಷರು ಜನಾಂಗದ ಏಳಿಗೆ, ಸಂಘದ ಏಳಿಗೆ ಕುರಿತು ಭಾಷಣ ಮಾಡಿದ ನಂತರ ಸಭೆಯು ನಾಲ್ಕು ವರೆಗೆ ಗಂಟೆಗೆ ಮುಕ್ತಾಯವಾಯಿತು.

ಹೆಚ್. ಯಂ. ಪೂವಣ್ಣ.
(ಗೌರವ ಸೆಕ್ರೆಟರಿ,)
ಕೊಡಗು ವೀರಶೈವ ವಿದ್ಯಾನಿಧಿ ಸಂಘ.

ಇಗ್ಗೋಡ್ಲು ಬಸುವಣ್ಣ ದೇವಸ್ಥಾನಕ್ಕೆ
ಧನ ಸಾಹಾಯ ಮಾಡಿದವರ ಹೆಸರು.

ತಲಾ ಒಂದು ರೂಪಾಯಿಯಂತೆ ಕೊಟ್ಟವರು—ಸುಂಟಿಕೊಪ್ಪ ನಾಡು ಪಾರುಪತ್ಯಗಾರವರು, ಸುಂಟಿಕೊಪ್ಪನಾಡು ಪಸ್ಯಾದಿ ಎನ್ ಬಸಪ್ಪನವರು, ಮೂದಾವುರು ಯಂ. ಅವುಲ ಮೇಸ್ತ್ರಿಗಳವರು, ಗುರುಸಂಜಯ್ಯನ ಜಂಗಮಂತ ಬಸುವಯ್ಯನವರು, ಮೂದಾವುರ ಮತದ ಗುರುವಾದಪ್ಪ ಮರಿ ದೇವರು, ಪಾಂಡಂಡ ಜಂಗಪ್ಪನವರು, ಮಂಡೇಟಿರ ಅಪ್ಪಯ್ಯನವರು, ಪಾಲೆಕಂಡ ಜಂಗಪ್ಪನವರು. ಐಯ್ಯಂಡ ಗಣಪತಿಯವರು

ತಲಾ ಎಂಟಾಣೆಯಂತೆ ಕೊಟ್ಟವರು—ಕರವಂಡ ಜಂಗಪ್ಪನವರು. ಪಾಂಡಂಡ ನಂಜಪ್ಪನವರು, ಬ್ಯಾಂ ಗುನಾದರಯ್ಯನವರು, ಮೇದುರ ಮೂದಪ್ಪನವರು, ಜಂಬೂರು ಗ್ರಾಮದ ಜಿ. ಕೆ. ಸಾಂತಕ್ಕಯ್ಯನವರು, ಕಂಟ್ರಾಕ್ಟುದಾರರು ಬಿ. ಸಾಂತಪ್ಪನವರು. ಯಂ ಪುಟ್ಟಮ್ಮೀರ್ ಬ್ಯಾರಿಗಳವರು ಕಾಂಡನಕೊಲ್ಲಿ ಬೆಲ್ಲತಕ ಐತಪ್ಪನವರು ಬೇಪಡಿಯಂಡ ಜೋಯಪ್ಪನವರು. ಸುಂಟಿಕೊಪ್ಪ ಕಂಟ್ರಾಕ್ಟುದಾರ ಸಾಂತಪ್ಪನವರು ಶ್ಯಾನೆ ಮೂದಪ್ಪನವರು. ಸುಪರ್‌ವೈಜರ್ ದೇವಯ್ಯನವರು ಸೋಮವಾರಪೇಟೆ ರೇಂಜರವರು, ಶ್ರೀಮತಿ ಮೊಣ್ಣಂಡ ಸೋಮಕ್ಕನವರು. ನಾಲ್ಕಾಣೆಯಂತೆ ಶ್ರೀಮತಿ ಸಾಕಮ್ಮನವರು.

ಮೇಲ್ಕಂಡ ಮಹನೀಯರುಗಳು ಅಲ್ಲದೆ ಬೇರೆ ಅನೇಕ ಮಹನೀಯರುಗಳು ನಾಲ್ಕಾಣೆ, ಎಂಟಾಣೆಗಳಂತೆಯೂ ಸಾಹಾಯಕ್ಕಾಗಿ ಚಂದಾ ವೊಟಲಗು ಕೊಟ್ಟಿರುತ್ತಾರೆ. ನಮ್ಮ ದೇವಸ್ಥಾನದ ಒಟ್ಟು ಖರ್ಚು 500 ರೂ. ಆಗಿರುತ್ತೆ. ಇಷ್ಟರ ವರೆಗೆ ಚಂದಾ ಎತ್ತಿದ ವೊಟಲಗು 50 ರೂ. ಆಗಿರುತ್ತೆ. ಮೇಲ್ಕಂಡ ಚಂದಾದಾರರಾದ ಮಹನೀಯರುಗಳಿಗೆ ಒಡ ರೈತರಾದ ನಮಗಳ ವಂದನೆ.

ಬಿ. ಐ ಪೂವಯ್ಯ.

WANTED.

Wanted agents to popularise HOUSE PURCHASE, MORTGAGE LOAN and TEN RUPEES DEBENTURE (Life & Marriage) SCHEMES. For Particulars and Prospectuses apply to—

The Premier Insurance and Building Society Madras Ltd

Or Our Special Agent—

Mr. G, Nagiah Naidu,
C/o P. Vijayaratnam Mudaliar.
P. W. D. Office,
Mercara (Coorg)

3—2

ಇಂದೇ ಆರಂಭಿಸಿರಿ!

ಸುಪ್ರಸಿದ್ಧ

ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯ ಏಣಿಯನ್ನೇರಿರಿ. ಲೋಕದಲ್ಲಿ ಸಾವಿರಾರು ಜನರು ಅದಿನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ನುತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ವರ್ಷಗಳ ಟನಿಕ್ಕಿಂದಕ್ಕೆ ರೂ. 1.

ಹೆಚ್ಚಿನ ವಿವರಕ್ಕೆ, ದರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮುಶಾಸ್ತ್ರವನ್ನೋದಿರಿ.

ಆತಂಕನಿಗ್ರಹ ಫಾರ್ಮಸಿ, ಜಿಕ್ಕಜೋಗಿಪಾಳ್ಯ,
52—5 ಬೆಂಗಳೂರು ಸಿಟಿ.

ಈ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ

ಜ್ವರದ ಗುಳಿಗೆಗಳು.

ಜಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಒರುವ ಜ್ವರ, ಮಲೇರಿಯೂ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಟಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
ಸಂಪೂರ್ಣ ಕಂಪೆನಿ,
ಗಿರಗಾಂವ್, ಮುಂಬಯಿ.
(52—30)

ಪ್ರಕಟಣೆ.

Repairing chairs, easy chairs, cane chairs, cots etc. in rattan will be done in singles, doubles and diamond at moderate charges.

ಬೆತ್ತದ ಕುರ್ಚಿ, ಆರಾಮು ಕುರ್ಚಿ ಮತ್ತು ಮಂಚ ಮುಂತಾದುವುಗಳನ್ನು ತೃಪ್ತಿಕರವಾಗಿ ಅತಿ ಸುಲಭ ಚಾರ್ಜಿನಲ್ಲಿ ಬೆತ್ತದಿಂದ ಮಾಡಲಾಗುವುದು.

Apply to:—
P. S. RAMAPPA,
Rattan Works,
MecDowell & Co., Buildings,
Mercara.
4—4

ESTATE KUMBLIES.

Wholesale Dealers. Moderate prices,

We suppiy good and fresh Kumblies direct from the manufacturers in wholesale and cheap rates avoiding the middleman's profits and commission Please place a trial order and compare the favourable rates All orders will be promptly delivered at the Estates at cost price.

Please apply to—
Messrs. G NAGAPPA,
Kumbly Merchants & Dealers in Rugs and Carpets,
Chikpet,
Bangalore City.
4—4

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ವಾಪಸು ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೈಯ್ಯನವರು,
ಅಮ್ಮತ್ತಿ.—ಸಿದ್ದಾಪುರ—ಮೆ. ಐನಂಡ ಮೂಕಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುಪ್ಪಮ್ಮೈಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಜಿ ಮೂಕಮ್ಮೈಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೂಚ್ಚೈಯ್ಯನವರು,
ಸೋಮವಾರಪೇಟೆ—ಮೆ. ಕೆ. ವೊಗಪ್ಪನವರು
ನಾಪೋಕ್ಲು—ಮೆ, ಬೆಳ್ಳಿಯಂಡ ಯಂ, ಪೂಣಚ್ಚನವರು,
(ನಾಪೋಕ್ಲು ಸೆಕ್ಷೀರ್ಸ್)

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಪಂಡಿತ ಜವಾಹರಲಾಲರ ಭಾಷಣ.

(3ನೇ ಪುಟದಿಂದ ಸಾಗಿದ್ದು.)

ಹಿಂದೆ ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮನ್ನು ಯಾರು ವಿರೋಧಿಸಿರುವರೋ ಅವರೊಡನೆ ಯಾವ ವಿಧವಾದ ರಾಜಿಯೂ ನಮಗೆ ಬೇಡ, ಯಾರು ಬ್ರಿಟಿಷ್ ಸಾಮ್ರಾಜ್ಯತ್ವಕ್ಕೆ ಯಾವ ವಿಧವಾಗಿಯಾಗಲೀ ಸಹಾಯವನ್ನು ಮಾಡುತ್ತಿರುವರೋ ಅವರೊಡನೆಯೂ ನನಗೆ ರಾಜಿಯು ಬೇಡ

ಅಧಿಕಾರ ಸ್ವೀಕಾರವು ಅವಮಾನಕರ.

ನನ್ನ ಮನವರಿಕೆ ಏನೆಂದರೆ ಕಾಂಗ್ರೆಸ್ಸು ಅಧಿಕಾರವನ್ನು ಸ್ವೀಕರಿಸುವುದಾಗಲೀ ಅಥವಾ ಅದರ ಬಗ್ಗೆ ಹಿಂದೆ ಮುಂದೆ ನೋಡಿ ಸಂದೇಹಪಡುವುದಾಗಲೀ ದೊಡ್ಡ ತಪ್ಪಾಗುವುದು. ನಾವು ದೊಡ್ಡ ಹಳ್ಳಕ್ಕೆ ಬಿದ್ದು ಮೇಲಕ್ಕೆ ಏಳಲು ಅಸಮರ್ಥರಾಗುವೆವು. ವ್ಯವಹಾರ ರಾಜನೀತಿಯು ಅದಕ್ಕೆ ವಿರೋಧವಾಗಿದೆ. ಕಾಂಗ್ರೆಸ್ಸಿನ ಸಂಪ್ರದಾಯವು ನಾವು ಜನಗಳಲ್ಲಿ ಬೆಳೆಸಿರುವ ಮನೋಭಾವವು ಅಧಿಕಾರ ಸ್ವೀಕಾರಕ್ಕೆ ವಿರೋಧವಾದುವು, ಮನಶಾಸ್ತ್ರ ರೀತಿಯಂತೆ ಈ ರೀತಿಯಲ್ಲಿ ನಾವು ಮುಂದೆ ಹೋಗುವುದು ಅಪಾಯಕರವಾದ ಪರಿಣಾಮಗಳಿಂದ ಕೂಡಿರುತ್ತದೆ. ನಾವು ಕ್ರಾಂತಿಕಾರಕವಾದ ಪರಿವರ್ತನೆಗಳಿಗೆ ಸಿದ್ಧರಾಗಿದ್ದರೆ, ನಮ್ಮ ಜನತೆಯಲ್ಲಿಯೂ ಕ್ರಾಂತಿಕಾರಕವಾದ ಮನೋಭಾವವನ್ನುಂಟುಮಾಡಬೇಕು. ಅದಕ್ಕೆ ವಿರೋಧವಾದ ಯಾವ ಮಾರ್ಗವೇ ಆಗಲೀ ನಮ್ಮ ಹಿತಕ್ಕೆ ಬಾಧಕವಾದುದು. ಮನಃಶಾಸ್ತ್ರ ರೀತಿಯೂದ ಪರಿಣಾಮವು ಮುಖ್ಯವಾದುದು. ಈ ಶಾಸನಸಭೆಗಳಲ್ಲಿ ಕೆಲಸಮಾಡಿ ನಾವು ನಮ್ಮ ಜನಗಳಿಗೆ ನಿಜವಾದ ಅಧಿಕಾರವನ್ನು ದೊರಕಿಸುತ್ತೇವೆಂಬ ಭ್ರಾಂತಿಯನ್ನು ನಮ್ಮ ಜನಗಳಲ್ಲುಂಟುಮಾಡಬಾರದು

ಶಾಸನ ಸಭೆಗಳಲ್ಲಿನ ಕೆಲಸವು ಅವ್ಯಾಹತವಾದುದಾದರೂ ಅದನ್ನು ದುರ್ಲಕ್ಷಿಸಿ ನಮ್ಮ ಕೆಲಸಕ್ಕೆ ತೊಡಕುಂಟುಮಾಡಿಕೊಳ್ಳಬಾರದು. ಆದುದರಿಂದಲೇ ಕಾಂಗ್ರೆಸ್ಸು ತನ್ನ ಕಾರ್ಯನಿರ್ವಾಹಕ ಸಮಿತಿಯ ಮಂತ್ರಾಂತರ ಜನಾಯಿಗಳನ್ನು ನೇರವಾಗಿ ಹತೋಟಿಗೆ ತಂದುಕೊಂಡು, ದೇಶದ ಮುಂದೆ ಕಾರ್ಯಕ್ರಮವನ್ನಿಡಬೇಕು.

ದೇಶೀಯ ಸಂಸ್ಥಾನಿಕ ಪ್ರಜೆಗಳು.

ಪ್ರಾಂತಿಕ ಶಾಸನ ಸಭೆಗಳೂ ಬರಬಹುದು ಆದರೆ ಈ ಅಪವಿತ್ರ ರಾಜಶಾಸನದ ಫೆಡರಲ್ ಭಾಗವು ಬರುವುದೆಂದು ಯಾರೂ ನಂಬುವುದಿಲ್ಲ. ನಮ್ಮ ವಿಷಯಕ್ಕೆ ಮೂಕನಾಡುವುದೆಂದರೆ ನಮ್ಮ ಯಾವತ್ತು ಶಕ್ತಿಯನ್ನು ಉಪಯೋಗಿಸಿ ಅದನ್ನು ಪ್ರತಿಭಟಿಸುವೆವು. ಪ್ರಾಂತಗಳಲ್ಲಿ ತೊಡರುಗಳನ್ನುಂಟುಮಾಡುವುದಕ್ಕೂ, ಹೊಸ 'ಆಕ್ಟ್' ಕಲಸದಲ್ಲಿ ಜಾರಿಗೆ ಬಂದಂತೆ ಏರ್ಪಡಿಸುವುದಕ್ಕೂ ಮತ್ತು ಫೆಡರೇಶನ್ನನ್ನು ಕೊಂದು ಹಾಕುವುದಕ್ಕೂ ನಾವು ನಮ್ಮ ಏರ್ಪಾಡು ಮಾಡಲಾಗಿದೆ. ಒಂದು ಕಡೆ ಫೆಡರೇಶನ್ ನಾಶವಾಗಬೇಕು. ಮತ್ತೊಂದು ಕಡೆ ಪ್ರಾಂತಿಕ ಸ್ವಾಧಿಕಾರಗಳು ನಾಶವಾಗಬೇಕು. ಈ ರೀತಿಯಾಗಿ ನಾವು ಭಾರತೀಯ ಪ್ರಜೆಗಳಿಗೆ ಒಂದು ಶುದ್ಧವಾದ ಲೇಖನಪಟವನ್ನು ಒದಗಿಸಿಕೊಡುವೆವು. ಆ ಪಟದ ಮೇಲೆ ನಾವು ಏನೇ ಬರೆಯಲಿ, ದೇಶೀಯ ಸಂಸ್ಥಾನಗಳನ್ನು ಫ್ಯೂಡಲ್ ಮತ್ತು ಥಿಯೋಕ್ರಾಟಿಕ್ (ಎಂದರೆ ಸಾಮಂತ ಮತ್ತು ನಿರಂಕುಶ ರಾಜಸತ್ತೆ) ರಾಜಸತ್ತೆಗಳಾಗಿ ಇರುವುದಕ್ಕೆ ಬಿಡುವುದಿಲ್ಲ. ಆ ಅವು ಬಹಳ ಹಿಂದಯೇ ಗತಿಸಿ ಹೋಗಬೇಕಾಗಿತ್ತು. ಒಂದು ಪರಕೀಯ ಸಂಕಾರವು ಅವನ್ನು ಎತ್ತಿ ಹಿಡಿದಿದೆ. ಪರಿವರ್ತನೆಗೆ ಗುರಿಯಾಗಿರುವ ಈ ಪ್ರಪಂಚದಲ್ಲಿ ಅವು ಅತ್ಯಂತ ವಿಚಿತ್ರವಾದ ಅಸಂಬ್ಧ ಸಂಸ್ಥೆಗಳಾಗಿ ಉಳಿದಿವೆ ನಮ್ಮ ಭವಿಷ್ಯದಲ್ಲಿ ನಿರಂಕುಶತೆಗಾಗಲೀ ಸಾಮಂತತೆಗಾಗಲೀ ಸ್ಥಾನವೇ ಇಲ್ಲ. ಸ್ವತಂತ್ರವಾದ ಭಾರತವು ತನ್ನ ಅನೇಕ ಮಕ್ಕಳ ಪರಾಧೀನತೆಯನ್ನು ಸಹಿಸಲಾರದು. ಮಾನವ ಜನ್ಮಸಿದ್ಧ ಅಧಿಕಾರಗಳು ಅವರಿಗಿಲ್ಲದಿರುವುದನ್ನು ತಾಳಲಾರದು. ಭಾರತವು ತನ್ನ ಪ್ರಜೆಗಳು ಕೂಯ್ಲಲ್ಪಟ್ಟು ಅನೇಕ ಭಾಗಗಳಾಗಿ ತುಂಡು ತುಂಡು ಮಾಡಲ್ಪಡುವುದಕ್ಕೆ ಒಪ್ಪಲಾರದು. ನಾವು ನಮಗೋಸ್ಕರವಾಗಿ ಯಾವ ಮಾನವಸಿದ್ಧ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳಿಗಾಗಿ ಹೋರಾಡುವೆವೋ ದೇಶೀಯ ಸಂಸ್ಥಾನಿಕ ಪ್ರಜೆಗಳಿಗಾಗಿಯೂ ಅದೇ ಹಕ್ಕುಗಳಿಗಾಗಿ ಹೋರಾಡುವೆವು.

ಕೋಮುವಾರು ತೀರ್ಪು.

ಹೊಸ ರಾಜ್ಯಾಂಗರಚನೆಯ ವಿಷಯವಾಗಿ ಒಹಳ ವಾದಕ್ಕೆ ಇಟ್ಟುಕೊಂಡಿರುವ ಅಂಗವು ಕೋಮುವಾರು ತೀರ್ಪು. ಅನೇಕರು ಅದನ್ನು ಬಲವಾಗಿ ಖಂಡಿಸಿದ್ದಾರೆ. ಅದರ ವಿಷಯವಾಗಿ ಒಳ್ಳೆಯ ಮಾತನಾಡುವವರು ಒಹು ಸ್ವಲ್ಪ. ನನ್ನ ಅಭಿಪ್ರಾಯವು ಸ್ಪಷ್ಟವಾಗಿದೆ. ಆ ತೀರ್ಪಿನಿಂದ ಯಾವ ಕೋಮಿಗೆ ಎಷ್ಟು ಬಂತು ಎಂಬುದು ನನ್ನ ಗುರಿಯಲ್ಲ. ಆ ತೀರ್ಪಿನ ಹಿಂದಿರುವ ಪ್ರೇರಣೆಯೇ ನನಗೆ ಸರಿಬೀಳುವುದಿಲ್ಲ. ಅದು ಇಂಡಿಯಾವನ್ನು ಅನೇಕ ಬೇರೆ ಬೇರೆ ಭಾಗಗಳಾಗಿ ಮಾಡಿದ ತತ್ವದ ಮೇಲೆ ಒಡೆಮು ಇಂಡಿಯಾದಲ್ಲಿ ಪ್ರಜಾಪ್ರಭುತ್ವವೂ ಆರ್ಥಿಕ ನೀತಿಯೂ ಅಭಿವೃದ್ಧಿಯಾಗಲು ತೊಂದರೆಯುಂಟುಮಾಡುವುದಿದ್ದ. ಪ್ರಜಾಪ್ರಭುತ್ವವೂ ಈ ಕೋಮುವಾರು ತೀರ್ಪು ಒಟ್ಟಿಗೆ ಇರಲಾರವು.

ಹಿಂದೆ ಕೋಮುವಾರು ಸಮಸ್ಯೆಯ ಬಗ್ಗೆ ಕಾಂಗ್ರೆಸ್ಸು ಏರ್ಪಡಿಸಿದ ಒಡಂಬಡಿಕೆಗಳೂ ರಾಜಿಗಳೂ ನನ್ನ ಮನಸ್ಸಿಗೆ ಪ್ರೀತಿಯವಾಗಿಲ್ಲ. ಕಾಂಗ್ರೆಸ್ಸು ಸಂಪೂರ್ಣ ಸ್ವಾತಂತ್ರ್ಯಕ್ಕೆ ಪ್ರಥಮ ಸ್ಥಾನವನ್ನು ಕೊಟ್ಟಿದೆ. ಕೋಮುವಾರು ಮುಂತಾದ ಸಮಸ್ಯೆಗಳಿಗೆ ಕಾಂಗ್ರೆಸ್ಸು ಪ್ರಧಾನಸ್ಥಾನವನ್ನು ಕೊಡಬಾರದು.

ಗಾಂಧೀಜಿಯವರು.

ನಾನು ಹಿಂದೆಯೇ ನಮ್ಮ ಸಂಸ್ಥೆಯು ಪ್ರಜಾಸತ್ತುದಾಯದಿಂದ ಬಹಳ ದೂರವಾಗುತ್ತಿದೆಯೆಂದು ಹೇಳಿದ್ದೇನೆ. ನಮ್ಮಲ್ಲಿ ಅನೇಕರು ವೈಯುಕ್ತಿಕವಾಗಿ ಪ್ರಜೆಗಳ ಮೇಲೆ ಪ್ರಭಾವಹೊಂದಿದ್ದೇವೆ. ನಮ್ಮ ಮೂತಿಗೆ ಅವಂಲ್ಲಿ ಬೆಲೆಯಿದೆ ಇಂಡಿಯಾದ ಅಸಂಖ್ಯಾತ ಪ್ರಜಾಸಮುದಾಯವು ನಮ್ಮ ಮುಖಂಡರಾದ ಗಾಂಧಿಜೀಯವರ ವಿಷಯದಲ್ಲಿ ತೋರಿಸುವ ಪ್ರೀತಿಯನ್ನೂ, ಪೂಜ್ಯಭಾವವನ್ನೂ ಅಳೆಯುವವರಾರು? ಆದಾಗ್ಯೂ ಒಂದು ಸಂಸ್ಥೆಯಾಗಿ ನಮಗೆ ಪ್ರಜಾವರ್ಗದೊಂದಿಗಿದ್ದ ಬಹಳ ಹತ್ತಿರದ ಸಂಪರ್ಕವನ್ನು ಕಳೆದುಕೊಂಡಿದ್ದೇವೆ. ಖಾದಿ ಗ್ರಾಮೋದ್ಯೋಗಗಳು ಮತ್ತು ಹರಿಜನೋದ್ಧಾರ ಇವುಗಳಲ್ಲಿ ತೊಡಗಿರುವ ನಮ್ಮ ಒಡನಾಡಿಗಳನೇಕರು ಪ್ರಜಾವರ್ಗದೊಂದಿಗೆ ಸಂಪರ್ಕಹೊಂದಿದ್ದಾರೆ. ಆ ಸಂಪರ್ಕದಿಂದ ಫಲವೂ ಆಗಿದೆ. ಆದರೆ ಆ ಸಂಪರ್ಕವೆಲ್ಲಾ ರಾಜಕೀಯವಾದುದಲ್ಲ ಮತ್ತು ನಾವು ರಾಜಕೀಯವಾಗಿ ಪ್ರಜೆಗಳೊಡನೆ ಸಂಪರ್ಕವನ್ನು ಹೊಂದಿಲ್ಲ. ಇದಕ್ಕೆ ಅನೇಕ ಕಾರಣಗಳುಂಟು ಅವುಗಳಲ್ಲಿ ಕೆಲವು ನಮ್ಮ ಹತೋಟಿಗೆ ಮೀರಿದವು ನಮ್ಮ ಈಗಿನ ಕಾಂಗ್ರೆಸ್ ರಚನೆಯು ಈ ಸಂಪರ್ಕಗಳನ್ನು ಅಭಿವೃದ್ಧಿಗೊಳಿಸುವುದಕ್ಕಾ, ಅವರ ವ್ಯಾಥಮಿಕ ಕಮಿಟಿಗಳಲ್ಲಿ ಪ್ರಜಾಪ್ರಭುತ್ವ ಭಾವನೆಯನ್ನು ಹುಡುವುದಕ್ಕೂ ಪ್ರೋತ್ಸಾಹಕೊಡುತ್ತಿಲ್ಲ. ಈ ಕಮಿಟಿಗಳು ಡೆಲಿಗೇಟುಗಳನ್ನು ಅಥವಾ ಪ್ರತಿನಿಧಿಗಳನ್ನು ಚುನಾಯಿಸುವುದಕ್ಕೆ ಮಾತ್ರ ಸೇರುತ್ತದೆ. ಕಾಂಗ್ರೆಸ್ಸಿನ ನೀತಿಯನ್ನು ರಚಿಸುವುದರಲ್ಲಿ ಅಥವಾ ರೂಪುಗೊಳಿಸುವುದರಲ್ಲಿ ಯಾವ ಭಾಗವನ್ನೂ ವಹಿಸುವುದಿಲ್ಲ.

ಕಾಂಗ್ರೆಸ್ಸಿನ ಅಂಗರಚನೆ.

ನಾವು ಮುಂದಿನ ಕಾಂಗ್ರೆಸ್ಸನ್ನು ಆಲೋಚಿಸೋಣ. ನಮ್ಮ ಈಗಿನ ಕಾಂಗ್ರೆಸ್ ಸಂಸ್ಥೆಯ ಕೆಲವು ಅಸಂಬದ್ಧತೆಗಳನ್ನು ನಿವಾರಿಸಿ ತೊಡಕುಗಳನ್ನು ಪರಿಹರಿಸಬೇಕು ನನ್ನ ಗೈರುಹಾಜರಿಯ ಕಾರಣ ಕಾಂಗ್ರೆಸ್ಸಿನ ಹೊಸ ಅಂಗರಚನೆಯು ಯಾವ ರೀತಿ ಕೆಲಸ ಮಾಡಿದೆ ಎಂಬ ಅನುಭವವೂ ನನಗಿಲ್ಲ. ನಾನು ಯಾವ ಗೊತ್ತಾದ ಸೂಚನೆಗಳನ್ನೂ ಮಾಡಲಾರೆ ಡೆಲಿಗೇಟುಗಳ ಸಂಖ್ಯೆಯನ್ನು ತಗ್ಗಿಸುವುದು, ಎ ಐ ಸಿ ಸಿ. ಯ ಸದಸ್ಯರ ಸಂಖ್ಯೆಯನ್ನು ತಗ್ಗಿಸುವುದು ಸ್ವಲ್ಪ ಮಟ್ಟಿಗೆ ಅಪೇಕ್ಷಣೀಯವಾಹರೂ ಅದರ ಹಿಂದೆ ಪೈಮರೀ ಮತ್ತು ಸೆಕೆಂಡರೀ ಕಮಿಟಿಗಳ ಕಾರ್ಯಕ್ರಮವು ಜಾರಿಯಾಗುವುದಾಗಿರಬೇಕು ಅದಿಲ್ಲದೆ ನಾವು ಪ್ರತಿನಿಧಿಗಳ ಮತ್ತು ಎ ಐ ಸಿ ಸಿ. ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಿದರೆ ನಾವು ಅಖಿಲ ಪ್ರಜಾ ಸಮುದಾಯದ ಕಡಿಮೆಯ ಪ್ರತಿಬಿಂಬವಾಗುತ್ತೇವೆ ಆದ ಕಾರಣ ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದು ಯುಕ್ತವಾಗಿ ಕಾಣುತ್ತದೆ. ಆದರೆ ಈಗಿನ ಸನ್ನಿವೇಶವು ನಿಜವಾದ ಪರಿಹಾರವೂ ಕೆಳಗಿನ ಕಮಿಟಿಗಳ ಚಟುವಟಿಕೆಯನ್ನು ಹೆಚ್ಚಿಸುವುದೂ ಆಗಿದೆ.

ದೇಹಶ್ರಮದ ಕಲಸವು ಜಯಪ್ರದವಾಗಿಲ್ಲವೆಂದು ನಾನು ಕೇಳಿದ್ದೇನೆ. ಹಾಗಾದರೆ ಅದನ್ನು ಬದಲಾಯಿಸಬೇಕು.

ಕಾಂಗ್ರೆಸ್ಸು ಸರ್ವ ವ್ಯಾಪ್ತವಾದ ಸಂಸ್ಥೆ. ಅನೇಕ ಹಿತಗಳ ಪ್ರತಿನಿಧಿ ಸಂಸ್ಥೆ. ಆದರೆ ಅದು ಮುಖ್ಯವಾಗಿ ರಾಜಕೀಯ ಸಂಸ್ಥೆ. ಅದಕ್ಕೆ ಅಂಗವಾಗಿ ಸ್ಪಿನ್ನರ್ಸ್ ಅಸೋಸಿಯೇಶನ್ ಮತ್ತು ಗ್ರಾಮಕೈಗಾರಿಕೆಗಳ ಸಂಸ್ಥೆಯಿದೆ. ಈ ಸಹಾಯ ಸಂಸ್ಥೆಗಳು ಆರ್ಥಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತವೆ. ಈಗಿನ ಭೂಕುಂದಾಯದ ಪದ್ಧತಿಯಲ್ಲಿ ರೈತರ ಭಾರವನ್ನು ತಗ್ಗಿಸಲು ಸಹಕಾರಿಯಾಗಿಲ್ಲ. ಕಾಂಗ್ರೆಸ್ಸು ಅದು ಇರುವ ಸ್ಥಿತಿಯಲ್ಲಿ ರೈತರ ಸಂಸ್ಥೆಯಾಗಿ ಪೂರ್ತಿಯಾಗಿ ಕೆಲಸ ಮಾಡಲು ಸಾಧ್ಯವಿಲ್ಲ. ಕೆಲವು ಪ್ರಾಂತಗಳಲ್ಲಿ ಅದು ರೈತರ ಪಕ್ಷವನ್ನು ವಹಿಸಿ ಅವರಿಗೆ ಪರಿಹಾರವನ್ನು ಕೊಡಿಸಿದೆ. ಕಾಂಗ್ರೆಸ್ಸು ರೈತರ ಸಂಸ್ಥೆಗಳೂ ಕೂಲಿಗಾರರ ಸಂಸ್ಥೆಗಳೂ ಇವುಗಳನ್ನು ಸ್ಥಾಪಿಸಿ ಈಗ ಇರುವ ಸಂಸ್ಥೆಗಳೊಂದಿಗೆ ಸಹಕರಿಸಿ ಪ್ರಜಾವರ್ಗದ ದೈನಂದಿನ ಅವಶ್ಯಕತೆಗಳೂ ಈ ಸಂಸ್ಥೆಗಳ ಮೂಲಕ ಪೂರ್ತಿಯಾಗುವಂತೆ ಏರ್ಪಡಿಸಬೇಕು. ಕಾಂಗ್ರೆಸ್ಸು ಪ್ರಜಾವರ್ಗದ ಆರ್ಥಿಕ ಹೋರಾಟದೊಂದಿಗೆ ಒಂದಾಗಿ ನಿಂತರೆ ನಾವು ಇನ್ನೂ ಹೆಚ್ಚು ಹೆಚ್ಚಾಗಿ ಸ್ವಾತಂತ್ರ್ಯದ ಗುರಿಯನ್ನು ಸಮೀಪಿಸುತ್ತೇವೆ. ಸ್ತ್ರೀಯರ ಸಂಸ್ಥೆಗಳನ್ನೂ ಇತರ ವಿಶೇಷ ಹಿತಗಳ ಸಂಸ್ಥೆಗಳನ್ನೂ ನಾನು ಅಲಕ್ಷಿಸುತ್ತೇನೆ. ಸ್ವಾತಂತ್ರ್ಯದ ರಾಷ್ಟ್ರೀಯ ಚಳವಳಿಯಲ್ಲಿ ಅವುಗಳೆಲ್ಲಾ ಪ್ರಯೋಜನಕಾರಿಯಾಗಬಹುದು. ಕಾಂಗ್ರೆಸ್ಸು ಈ ಎಲ್ಲ ಸಂಸ್ಥೆಗಳ ಚಟುವಟಿಕೆಗಳನ್ನೂ ಒಂದುಗೂಡಿಸಿ ಆದಷ್ಟು ಮಟ್ಟಿಗೆ ಪ್ರಜಾ ಸಮುದಾಯದ ಅಭ್ಯುದಯದ ಅಡಿಗಲ್ಲಿನ ಮೇಲೆ ನಿಲ್ಲಲು ಅವಕಾಶಹೊಂದುವುದು.

ಸೆಂಟ್ರಲ್ ಬ್ಯಾಂಕು ವಿೂಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ವಿೂಟಿಂಗು ಈ ತಾರೀಕು 25—4—1936 ರಲ್ಲು ಬೆಳಿಗ್ಗೆ II ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳ ಹಾಜರಿದ್ದರು. ವೆ. ಗಳಾದ (1) ಪುದ್ಯಂಡ ವಿ ಬೆಳ್ಯಪ್ಪನವರು (ಪ್ರೆಸಿಡೆಂಟರು) (2) ಮನೆಯಪಂಡ ಯಂ ಬೆಳ್ಯಪ್ಪನವರು (ಗೌರವ ಕಾರ್ಯದರ್ಶಿಯವರ) (3) ರಾವ್ ಸಾಹೇಬ್ ಪಾಂಡಂಡ ಜಂಗಪ್ಪನವರು (ಟ್ರೆಜರರ್) (4) ಬಲ್ಲಚಂಡ ಬೆಳ್ಯಪ್ಪನವರು (5) ಪಾಲೇಕಂಡ ತಮ್ಮಯ್ಯನವರು (6) ಪಿ ಜಿ. ಮುದ್ದಯ್ಯನವರು (7) ಕೊಳ್ಳಿಮಾಡ ಕರುಂಬಯ್ಯನವರು (8) ಏನಂಡ ಕಾರ್ಯಪ್ಪನವರು ಮತ್ತು (9) ಒಡುವಂಡ ಗಣಪತಿಯವರು.

ಈ ಕೆಳಗಿನ ಡೈರೆಕ್ಟರುಗಳು ಗೈರುಹಾಜರಾಗಿದ್ದರು. ವೆ. ಗಳಾದ (1) ಐಚೆಟ್ಟಿರ ಸುಬ್ಬಯ್ಯನವರು (2) ನಡಿಕೇರಿಯಂಡ ಸೋಮಯ್ಯನವರು (3) ಕೇಕಿಯಂಡ ಬೆಳ್ಯಪ್ಪನವರು (4) ಜನಮ್ಮಂಡ ಮಾಚಪ್ಪನವರು (5) ಉದಿಯೊಂಡ ಮಾಚ್ಚಯ್ಯನವರು ಮತ್ತು (6) ಕಂಬಿರಂಡ ಬೆಳ್ಯಪ್ಪನವರು.

ಸೀನಿಯರ್ ಆನ್‌ಕ್ರೆಡಿಟ್ ಇನ್ಸ್‌ಪೆಕರ್ ವೆ. ಪಿ. ಎಂ. ಚಂಗಪ್ಪನವರು ಸಹ ಹಾಜರಿದ್ದರು..

1. ಕಳೆದ ವಿೂಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು

2. ಸುಪರ್‌ವಿಜನ್ ಬೋರ್ಡಿನ ಕಳೆದ ವಿೂಟಿಂಗಿನ ಪ್ರೊಸೀಡಿಂಗ್ಸ್‌ನ್ನು ಓದಿ ಒಪ್ಪಲಾಯಿತು.

3 ಕಳೆದ ಮಾರ್ಚಿ ತಿಂಗಳ ಜಮಾ ಮತ್ತ ಖರ್ಚಿನ ಲೆಖ್ಖ ಓದಿ ಮಂಜೂರ್ಮಾಡಲಾಯಿತು.

ಹಿಂದಳ ತಿಂಗಳ ಸಿಲ್ಕು	ರೂ	19814	14 7
ಸದರಿ ತಿಂಗಳಲ್ಲು ವಸೂಲಾತಿ		34747	12 0
ಜುಮ್ಲ		54,562	10 7
ಸದರಿ ತಿಂಗಳಲ್ಲು ಖರ್ಚು		25207	5 6
ಬಾಕಿ ಸಿಲ್ಕು		29355	5 1

4. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. (1) ಬಿಳಿಗೇರಿ ಸಂಘಕ್ಕೆ ರೂ. 1500 (2) ಕೋಪಟ್ಟಿ ಸೊಸೈಟಿಗೆ ರೂ 300 (3) ನಾಕೇರಿ ಸೊಸೈಟಿಗೆ ರೂ. 1000 (4) ನಂದಿಗುಂದ ಸೊಸೈಟಿಗೆ ರೂ. 600 (5) ಶನಿವಾರಸಂತೆ ಕ್ರಾಸ್, ಲೋನ್, ಸೇಲ್ ಮತ್ತು ಅಂಡ ಸಪ್ಲೈ ಸೊಸೈಟಿಗೆ ರೂ 500 (6) ಬೇಟೋಳಿ ಸೊಸೈಟಿಗೆ ರೂ. 1200 (7) ವಾಲ್ನೂರು ತ್ಯಾಗತ್ತೂರು ಸೊಸೈಟಿಗೆ ರೂ. 1000 (8) ಹೊಸೂರು ಸೊಸೈಟಿಗ ರೂ 1500 (9) ಕಾರ್ಮಾಡು ಸೊಸೈಟಿಗೆ ರೂ. 250 (10) ಹೆಬ್ಬಲಗುಂದ ಸೊಸೈಟಿಗೆ ರೂ 1500 (11) ಹೊದ್ದೂರು ಸೊಸೈಟಿಗೆ ರೂ. 1500 (12) ಹೆಬ್ಬಾಲೆ ಪಂಚಮ ಸೊಸೈಟಿಗೆ ರೂ. 300 (13) ಕೂಡುಮಂಗಳೂರು ಸೊಸೈಟಿಗೆ ರೂ. 1000 (14) ಸಂಜರಾಜಪಟ್ಣ ಸೊಸೈಟಿಗೆ ರೂ. 600 (15) ಬೆಕ್ಕಸೊಡ್ಲೂರು ಸೊಸೈಟಿಗೆ ರೂ. 1800 (16) ಹುದುರೂರು ಸೊಸೈಟಿಗೆ ರೂ. 900 (17) ಆರ್ಜಿ ಸೊಸೈಟಿಗೆ ರೂ. 2000 (18) ಕುಕ್ಲೂರು ಸೊಸೈಟಿಗೆ ರೂ. 1000 (19) ಕುಂಜಲಗೇರಿ ಸೊಸೈಟಿಗೆ ರೂ. 2000 (20) ವಾಡಿನಾಲ್ಕುನಾಡು ಸ್ಪೋರ್ಟಿಗೆ ರೂ. 1000 (21) ನಾಪೋಕ್ಲು ಸ್ಕೂಲ್ ವಿದ್ಯಾರ್ಥಿಯರ ಸ್ಪೋರ್ಟಿಗೆ ರೂ. 200 ಮತ್ತು (22) ಕುಂದ ಮತ್ತು ಈಜೂರು ಸೊಸೈಟಿಗಳಿಗೆ ರೂ. 2000 ಕ್ಕೆ ಏರದೆ ಮಂಜೂರಾಡವು.

6. ಈ ಕೆಳಗಿನ ಸೊಸೈಟಿಗಳ ಸಾಲದ ಅರ್ಜಿಗಳನ್ನು ಕಾರಣಾಂತರಗಳಿಂದ ಬರುವ ವಿೂಟಿಂಗಿನಲ್ಲಿ ಆಲೋಚಿಸುವಂತೆ ತೀರ್ಮಾನಿಸಲಾಯಿತು (1) ಬೇಗೂರು ಸೊಸೈಟಿ (2) ತೊರೆನೂರು ಸೊಸೈಟಿ (3) ಕಡಗದಾಳು ಸೊಸೈಟಿ ಮತ್ತು (4) ಮಡಿಕೇರಿ ಟೌನ್ ಸೊಸೈಟಿ.

7 ಸುಪರ್‌ವೈಜರುಗಳ ವ್ಯಾವಿಡೆಂಟ್ ಫುಂಡಿನ ಹದಲಿಕೆಯನ್ನು ರೂವಾಯಿಗೆ 1 ಆಣೆಯ ಬದಲು 2 ಆಣೆಗ ಏರಿಸಬೇಕೆಂಬ ವಿಷಯವನ್ನು ಬರುವ ವಿೂಟಿಂಗಿಗೆ ಮುಂದರಿ ಇಡಲಾಯಿತು.

8 ಬ್ಯಾಂಕಿಗೆ ಮರುಪಾವತಿ ಮಾಡಬೇಕಾದ ರೂ. 1838—6—0 ಕ್ಕೆ 10 ಕಂತುಗಳನ್ನು ಕೊಡಿಸಬೇಕೆಂದು ಜೇಂದಂಡ ಕುಟುಂಬ ಸಂಘದ ಪ್ರೆಸಿಡೆಂಟರು ಬರಕೊಂಡ ಅರ್ಜಿಯನ್ನು ಓದಲಾಯಿತು.

ಸದರಿ ಸಂಘದವರು ಬ್ಯಾಂಕಿನ ಮರುಪಾವತಿ ಮಾಡಲಿಕ್ಕಿರುವ ವಾಯಿದೆ ಏರಿದೆ ಹಣದ ಶೇಕಡ 25 ರಷ್ಟನ್ನು ಬರುವ ಜೂನ್ ತಿಂಗಳ ಅಖೈರು ವಳಗೆ ಮರುಪಾವತಿ ಮಾಡಿದ್ದೇ ಆದರೆ ಹೆಚ್ಚಿನ ಕಂತುಗಳನ್ನು ಕೊಡುವ ವಿಷಯ ಆಲೋಚಿಸಲಾದೀತೆಂತ ತೀರ್ಮಾನಿಸಲಾಯಿತು.

9. ಒಬ್ಬ ಮಹನೀಯಳು ಐತಾದ ತನ್ನ ಗೂಡನ ಹೆಸರಿನಲ್ಲಿ ಬ್ಯಾಂಕಿನಲ್ಲಿರುವ ಡಿಪಾಜಿಟ್ಟು ಪೊಲಿಗನ್ನು ತನ್ನ ಮೈನರ್ ಮಗನ ಹೆಸರಿಗೆ ವರ್ಗಾಯಿಸಿಕೊಡಬೇಕೆಂದು ಬರಕೊಂಡ ಪತ್ರವನ್ನೂ, ಅದಕ್ಕೆ ಸಮ್ಮಂಧವಾಗಿ ಬರೆದುಕೊಟ್ಟ ವಕೀಲರ ಅಭಿಪ್ರಾಯದ ಪತ್ರವನ್ನೂ ಓದಲಾಯಿತು.

ವಕೀಲರ ಅಭಿಪ್ರಾಯದಂತೆ ಅರ್ಜಿದಾರಳಿಂದ ಮೈನರು ಮಗು ಮೆಜಾರ್ಟಿಗೆ ಬರುವ ವರೆಗೆ ಹಣ ಹೊಂದಿಕೊಳ್ಳುವುದಿಲ್ಲವೆಂತ ಒಂದು ಸ್ಟೇಟ್‌ಮೆಂಟನ್ನು ತೆಗೆದುಕೊಂಡು ತದನಂತರ ಮೈನರಿನ ಹೆಸರಿಗೆ ಡಿಪಾಜಿಟ್ಟು ಪೊಟಲಗನ್ನು ವರ್ಗಾಯಿಸಿ ತಾಯಿಯನ್ನು ಗಾರ್ಡಿಯನ್ನಾಗಿ ನೇಮಿಸುವಂತೆ ತೀರ್ಮಾನಿಸಲಾಯಿತು.

10. ಬ್ಯಾಂಕಿನ ಮೆಂಬರುಗಳಾಗಿಲ್ಲದಿರುವ ಈ ಕೆಳಗಿನ ಸೊಸೈಟಿಗಳನ್ನು ಮೆಂಬರುಗಳಾಗಿ ಆರಿಸಿಕೊಳ್ಳಲಾಯಿತು. (1) ನಾವೋಕ್ಲು ಸ್ಕೂಲ್ ವಿದ್ಯಾರ್ಥಿಯರ ಸೆಟ್ಲರ್ (2) ಬಾಳಲೆ ಸೊಸೈಟಿ ಮತ್ತು (3) ಮನೆಯಪಂಡ ಕುಟುಂಬ ಸೊಸೈಟಿ

11. ಒಬ್ಬ ಮಹನೀಯಳು ತನ್ನ ಗಂಡನು ಪಾಕಿತಾದ ಕಾರಣ ಅವಂ ಹೆಸರಿನಲ್ಲಿ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇರುವ 200 ರೂಪಾಯಿಗಳನ್ನು ಒಡ್ಡಿ ಸಮೇತ ನಾಪ್ತು ಕೊಡಬೇಕೆಂತ ಬರಕೊಂಡ ಅರ್ಜಿಯನ್ನು ಇನ್ನೊಂದು ವಿಟಿಂಗಿನಲ್ಲಿ ಆಲೋಚಿಸಬಹುದೆಂದು ತೀರ್ಮಾನಿಸಲಾಯಿತು.

12. ಬ್ಯಾಂಕಿನ ಅಸಿಸ್ಟೆಂಟ್ ಗುಮಾಸ್ತರ ಕೆಲಸವನ್ನು ಖಾಯಂ ಮಾಡುವ ಮತ್ತು ಅವರ ಸಂಬಳದ ಸ್ಕೇಲಿನ ವಿಷಯ ಬರುವ ವಿಟಿಂಗಿನಲ್ಲಿ ಆಲೋಚಿಸಬಹುದೆಂತ ತೀರ್ಮಾನವಾಯಿತು.

13. ಒಬ್ಬ ಮಹನೀಯಳು ತನ್ನ ಹೆಸರಿನಲ್ಲಿರುವ 200 ರೂಪಾಯಿ ಡಿಪಾಜಿಟ್ಟು ಪೊಟಲಗನ್ನು ಒಡ್ಡಿ ಇಲ್ಲದೆ ವಾಪ್ತು ಕೊಡಬೇಕೆಂದು ಅರ್ಜಿ ಒದಗಿಸಿಕೊಂಡ ಮೇರೆ ಮಂಜೂರ್ ಮಾಡಲಾಯಿತು.

ಪಿ. ಐ ಬೆಳ್ಯಪ್ಪ.
(ಅಧ್ಯಕ್ಷರು.)

SHIROMANI NARAYANACHARYA
Choukhamba Benares City.

THIS MAN
OUR CUSTOMER

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀವಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುವಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರಮಾಣದ ಕೊರಳ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ 1ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 4ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕಾಶಿ ಪ್ರತಿಬಿಂಬ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,
52—35 ಚೌಖಂಬಾ ಬೆನಾರಸ್, (ಕಾಶೀ)

ಎಲ್ಲಾ ಟೈಪ್‌ಗೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ಡಿವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ಡಿವಸೆ ಭಂಡಾರಂದಿ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ಡಿವಸೆ ಭಂಡಾರಂಗಳ ಕೆಲಸಗಳನ್ನು ಕ್ರಮವಾಗಿ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾಖಲಾ ಫಾರಮುಗಳೂ, ಖರೀದು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರೀದು ಫಾರಮುಗಳೂ, ಸೆಕ್ಷನರ್ ಕೇಸರ್ ಖರೀದು ಫಾರಮುಗಳೂ ಹವಜರ್ ಪುಸ್ತಕಗಳೂ, ರಶೀತ ಪುಸ್ತಕಗಳೂ, ಜಮಾ ಖರ್ಚಿನ ರಿಜಸ್ಟರ್ ಪುಸ್ತಕಗಳೂ, ಎತ್ತಿ ಚೆಕ್ ಪುಸ್ತಕಗಳೂ ಸಾಮಾನ್ಯ ಕಡಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದಾಂ ಬೆಲೆಕ್ಕೆ ಬೇಡಿಕೆ ಬಂದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು

ಮೇನೇಜರ್
"ಕೊಡಗು, ಲಿಮಿಟೆಡ್,
ಮಡಿಕೇರಿ.

ಗುಂಡು ಹೊಡೆಯುವ ಕ್ರಮಗಳು.
ಉಪಯುಕ್ತ ಸೂಚನೆಗಳು.

ವಿಚಾರಿಗಳಿಗೆ:—
ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.



Goolamhusain Allibhoy & Sons, Ltd.,
26—26 210, Abdulrehman Street, BOMBAY 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್:

ಅಧ್ಯಕ್ಷರು—ಮಾನನೀಯ ಸರ್ ಲಲ್ಲುಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.
ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನಪೂರ್ತಿ ನಂಬಿರಿ.
ಪತಿವ್ರತೆಯರು ಮತ್ತು ವ್ಯಾಪಾರಸ್ಥರು ವಗೈರೆಯರಿಗೆ ಏಕೀಭವಿಸಿ (ಜಾಯಿಂಟ್ ಲೈಫ್)
ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಾಸಾತ್ ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಪೊಬಲಗನ್ನು ಮುಂದಳ ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಶನ್ ರೀತಿಯಲ್ಲು ಉದಾರತ್ವದಿಂದ ಕೊಡಲು ಈ ಕಂಪೆನಿಯ ಎದುರು ನಿಂತಿದೆ ಎಂದು ನೆನಪಿರಲಿ.
ಮುಕುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್,
ಮಹದೇವಪೇಟೆ, ಮಡಿಕೇರಿ
26—20

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."



ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸುಂದರ್ಕ್ಷಣೆಯನ್ನೂ ಮಾಡುತ್ತದೆ. ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿಡುವರೋ ಯಾರು ಯಾರು ತಮ್ಮ ಚರ್ಮವನ್ನು ಎಚ್ಚರಿಕೆಯಿಂದ ಸೋಡುವರೋ ಅವರೆಲ್ಲರೂ ಉಪಯೋಗಿಸುವುದು ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲಿ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.
52—9 ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿಕವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ನೊಬಲಗು	—	37,180— 0—0
ಜಮೂಬಂದ ಠೇವಣಾತಿ	—	25,9035—8—10
ವಸೂಲಾದ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಲಕ್ಕುಮ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ನಿಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,
ಪಂದ್ಯಂಡ ಐ. ಬೆಳ್ಯಪ್ಪನವರು.

ಡೈರೆಕ್ಟರ್
ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ಕಾರ್ಯಾಲಯ 1-2-1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯ ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿ ಪಥದಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವ ಜೀವಸಂಜೀವಿನಿಯನ್ನು ಎಲ್ಲರೂ ತಿಳಿದಿದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾಗಿರುತ್ತಿರಲಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿದ್ದುದರಿಂದ ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಅಗಿಂದಾಗ್ಯೆ ತೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿದ್ದಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಟರ್ಸ್:
ಕೆ. ಟಿ. ಡೋಂಗರೆ ಕಂಪೆನಿ,
(52—9) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application

Head office:—
Empire of India Life Building,
BOMBAY.

52—23

Branch Office:—
152/3—Commercial Street,
BANGALORE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ
ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪಾಶ್ಚಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಬಜಾರ್‌ಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ಧೃಷ್ಟಾಮೃತ

ಈ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಗಳಿಂದ ತಯಾರಿಸಿದ ಮುಧರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣಿಳಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವು ಬರುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಾಣು ಬರುವದು. ಪ್ರಮಾಣ:—ಬೆಳಗಿನಲ್ಲಿ ಬಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4 0, 3 ಬಾಟ್ಲಿಗೆ ರೂ 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವ್.)

52—34

ಕೊಡಗಿನ ಏಜಂಟರು:—ನಾವೆಲ್ಟಿ ಸ್ಟೋರ್ಸ್, ಮಡಿಕೇರಿ
ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ
ಎ. ಎನ್ ಹುಚ್ಚಯ್ಯ, ವರ್ಚೆಂಟ್, ಗೋಣಿಕೊಪ್ಪಲು.

ಭರತಾ ಬ್ರದರ್ಸ್, ಕಾಕಡದಗೋಡು.]

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ
ಜೀವ ವಿಮೆ ಕಂಪೆನಿ ಲಿಮಿಟೆಡ್.

(೧೮೭೫ರಲ್ಲಿ ಇಂಡಿಯಾದಲ್ಲಿ ಸ್ಥಾಪಿಸಲ್ಪಟ್ಟದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ವಾಲಿಸಿಗಳ ಪ್ರೀಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ.	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ವಾಲಿಸಿಗಳು	ರೂ.	54,20,38,518
ಕ್ಲೇಮುಗಳಿಗೆ ಕೊಟ್ಟ ಒಟ್ಟು ಹಣ	ರೂ	16,29,88 814
ಫಂಡ್ಸ್ ಹೆಚ್ಚಿದ್ದು	ರೂ	15,53,88 843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯಾದ ಜೀವ ವಿಮೆ ಕಂಪೆನಿಯಲ್ಲಿ ಏನೂ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಅಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನ್
ಅಹ್ಮದಾಬಾದು	ಕಲ್ಕತ್ತಾ	ಕೊಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನಾ	ಸಿಂಗಪುರ
ಅಲ್ಲಾಹಾಬಾದು	ಕೊಚ್ಚಿನ್	ಲಕ್ನೌ	ಪೂನ	ಸುಕ್ಕೂರು
ಅಂಬಾಲಾ	ಡಲ್ಹಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಬಳ್ಳಾರಿ	ಗೌಹತಿ	ಮಂಡಲೆ	ರಾಜಕೋಟೆ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಂಡಿಕೇರಿ	ರಂಗೂನ	ವಿಶಾಖಪಟ್ಟಣ
ಕೊಯಂಬತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು,

52—16

ಯಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)

Printed & published by P I Belliappa at 'Kodagu" Press Mercara for "Kodagu" Ltd.